ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ ಬಳ್ಳಾರಿ, ಕೊಪ್ಪಳ, ಯಾದಗಿರಿ, ರಾಯಚೂರು, ಕಲಬುರ್ಗಿ, ಬೀದರ, ವಿಜಯನಗರ ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 123 RNI Number : KNKAN/25/A2770 12-05-2026 Tuesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :123 ರಾಯಚೂರು 12-05-2026 ಮಂಗಳವಾರ ಪುಟ 04 ಬೆಲೆ ರೂ.2/- ಮೊ:8660146563

ತುಟ್ಟಿ ಭತ್ಯೆ ಶೇ 1.50 ರಷ್ಟು ಹೆಚ್ಚಳ, ಜ.1ರಿಂದಲೇ ಪೂರ್ವಾನ್ವಯ

ಬೆಂಗಳೂರು,ಮೇ.11-

ರಾಜ್ಯ ಸರ್ಕಾರಿ ನೌಕರರಿಗೆ ಶೇ. 1.50 ರಷ್ಟು ತುಟ್ಟಿ ಭತ್ಯೆ () ಹೆಚ್ಚಳ ಮಾಡಿ ಸರ್ಕಾರ ಆದೇಶಿಸಿದೆ. ಈ ಮೂಲಕ ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರ ಗುಡ್ ನ್ಯೂಸ್ ನೀಡಿದೆ.

2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ರಾಜ್ಯ ಸರ್ಕಾರಿ ನೌಕರರಿಗೆ ಜ.1, 2026ರಿಂದ ಜಾರಿಗೆ ಬರುವಂತೆ ತುಟ್ಟಿ ಭತ್ಯೆಯ ದರಗಳನ್ನು ಪ್ರಸ್ತುತ ಮೂಲ ವೇತನದ ಶೇ. 14.25 ರಿಂದ ಶೇ.15.75 ಗೆ ಪರಿಷ್ಕರಿಸಿ ಮಂಜೂರು ಮಾಡಿದೆ. ಏಪ್ರಿಲ್‌ನಲ್ಲಿ ಕೇಂದ್ರ ಸರ್ಕಾರ ತನ್ನ ನೌಕರರಿಗೆ ಶೇ.2 ರಷ್ಟು ದಷ್ಟು ತುಟ್ಟಿ ಭತ್ಯೆ ಹೆಚ್ಚಳ ಮಾಡಿ ಆದೇಶಿತ್ತು. ಇದೀಗ ರಾಜ್ಯ ಸರ್ಕಾರ ತನ್ನ ನೌಕರರಿಗೆ ಶೇ. 1.50 ರಷ್ಟು ಡಿಎ ಹೆಚ್ಚಳ ಮಾಡಿ ಆದೇಶಿಸಿದೆ.

ತುಟ್ಟಿಭತ್ಯೆಯ ಉದ್ದೇಶಕ್ಕಾಗಿ ಮೂಲ ವೇತನ ಎಂದರೆ ಸರ್ಕಾರಿ ನೌಕರನು ಧಾರಣ ಮಾಡಿರುವ ಹುದ್ದೆಗೆ ಅನ್ವಯವಾಗುವ ವೇತನ ಶ್ರೇಣಿಯಲ್ಲಿ ಪಡೆಯುತ್ತಿರುವ ವೇತನ ಮತ್ತು ಅದರಲ್ಲಿ 2024ರ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ನೌಕರನಿಗೆ ಸ್ಥಗಿತ ವೇತನ

ರಾಜ್ಯ ಸರ್ಕಾರಿ ನೌಕರರಿಗೆ ಗುಡ್ ನ್ಯೂಸ್

ಬಡ್ತಿಯನ್ನು ನೀಡಲಾಗಿದ್ದರೆ, ಆ ಸ್ಥಗಿತ ವೇತನ ಬಡ್ತಿ ಸೇರಿಸಲಾಗುವುದು.

ಅದೇ ರೀತಿ 2024ರ ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮದಡಿ ನೌಕರನಿಗೆ ನೀಡಲಾದ ವೈಯಕ್ತಿಕ ವೇತನ ಯಾವುದಾದರೂ ಇದ್ದರೆ, ಆ ವೈಯಕ್ತಿಕ ವೇತನ ಹಾಗೂ ವೇತನ ಶ್ರೇಣಿಯ ಗರಿಷ್ಠಕ್ಕಿಂತ ಹೆಚ್ಚಾಗಿ ಸಿಬ್ಬಂದಿಗೆ ಮಂಜೂರು ಮಾಡಲಾಗಿರುವ ಹೆಚ್ಚುವರಿ ವೇತನ ಬಡ್ತಿ ಯಾವುದಾದರೂ ಇದ್ದಲ್ಲಿ, ಅವುಗಳನ್ನು ಸೇರಿಸಿ ಅದರ ಮೇಲೆ ತುಟ್ಟಿಭತ್ಯೆ ನೀಡಲಾಗುತ್ತದೆ.

ರಾಜ್ಯ ಸರ್ಕಾರದ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೆ ಮತ್ತು ರಾಜ್ಯದ ಸಂಚಿತ ನಿಧಿಯಿಂದ ನಿವೃತ್ತಿ ವೇತನ ಮತ್ತು ಕುಟುಂಬ ನಿವೃತ್ತಿ ವೇತನವನ್ನು ಪಡೆಯುತ್ತಿರುವಂತಹ ಅನುದಾನಿತ ಶಿಕ್ಷಣ ಸಂಸ್ಥೆಗಳ ನಿವೃತ್ತಿ ವೇತನದಾರರು/ಕುಟುಂಬ ನಿವೃತ್ತಿ ವೇತನದಾರರಿಗೂ 1ನೇ ಜನವರಿ 2026 ರಿಂದ ಜಾರಿಗೆ ಬರುವಂತೆ ಹಾಲಿ ಲಭ್ಯವಿರುವ ತುಟ್ಟಿಭತ್ಯೆಯ ದರಗಳನ್ನು ಮೂಲ ನಿವೃತ್ತಿ ವೇತನ/ಕುಟುಂಬ ನಿವೃತ್ತಿ ವೇತನದ ಪ್ರಸಕ್ತ ಶೇಕಡ 14.25 ರಿಂದ ಶೇಕಡ 15.75 ಕ್ಕೆ ಹೆಚ್ಚಿಸಿ ಮಂಜೂರು ಮಾಡಲಾಗಿದೆ.

ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿಗಳ ನಿವೃತ್ತ ನೌಕರರಿಗೂ ಈ ತುಟ್ಟಿ ಭತ್ಯೆ ಪರಿಷ್ಕರಣೆ ಅನ್ವಯಿಸುತ್ತವೆ. ಸರ್ಕಾರದ ಮತ್ತು ಜಿಲ್ಲಾ ಪಂಚಾಯತ್‌ಗಳ ಪೂರ್ಣಾವಧಿ ನೌಕರರಿಗೆ, ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ವರ್ಕ್‌ಚಾರ್ಜ್ ನೌಕರರಿಗೆ ಹಾಗೂ ಸರ್ಕಾರದಿಂದ ಸಹಾಯಾನುದಾನ ಪಡೆಯುತ್ತಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಾಲಿಕ ವೇತನ ಶ್ರೇಣಿಗಳಲ್ಲಿರುವ ಪೂರ್ಣಾವಧಿ ನೌಕರರಿಗೆ ಈ ಆದೇಶ ಅನ್ವಯಿಸಲಿದೆ.

ಯುಜಿಸಿ/ಎಐಸಿಟಿಇ/ಐಸಿಎಆರ್ ವೇತನ ಶ್ರೇಣಿಗಳಲ್ಲಿ ವೇತನ ಪಡೆಯುತ್ತಿರುವ ನೌಕರರಿಗೆ ಮತ್ತು ಎನ್‌ಜೆಪಿಸಿ ವೇತನ ಶ್ರೇಣಿಗಳ ನ್ಯಾಯಾಂಗ ಅಧಿಕಾರಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುತ್ತದೆ.

ಈ ಆದೇಶದ ಮೇರೆಗೆ ಲಭ್ಯವಿರುವ ತುಟ್ಟಿ ಭತ್ಯೆಯನ್ನು ಮುಂದಿನ



ಆದೇಶದವರೆಗೆ ನಗದಾಗಿ ಪಾವತಿ ಮಾಡುವುದು, ತುಟ್ಟಿಭತ್ಯೆಯ ಕಾರಣದಿಂದ ಸಂದಾಯ ಮಾಡಬೇಕಾಗಿರುವ 50 ಪೈಸೆ ಹಾಗೂ ಅದಕ್ಕಿಂತ ಹೆಚ್ಚಿನ ಭಿನ್ನಾಂಕಗಳನ್ನು ಮುಂದಿನ ರೂಪಾಯಿಗೆ ಪೂರ್ಣಗೊಳಿಸತಕ್ಕದ್ದು. ಮತ್ತು 50 ಪೈಸೆಗಿಂತ ಕಡಿಮೆ ಇರುವ ಭಿನ್ನಾಂಕಗಳನ್ನು ಕಡೆಗಣಿಸತಕ್ಕದ್ದು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಆಶಾ ಕಾರ್ಯಕರ್ತೆಯರ ಬಾಕಿ ವೇತನ ಬಿಡುಗಡೆ ಆಗ್ರಹಿಸಿ ಪ್ರತಿಭಟನೆ

ಸಂಜೆ ಜ್ವಾಲೆ

ರಾಯಚೂರು, ಮೇ.11-ಆಶಾ ಕಾರ್ಯಕರ್ತೆಯರಿಗೆ ಮಾಸಿಕ ಗೌರವಧನ ಹಾಗೂ ಪ್ರೋತ್ಸಾಹಧನ ಬಿಡುಗಡೆಗೊಳಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಹಾಗೂ ಎಐಟಿಯುಸಿ ಜಿಲ್ಲಾ ಸಮಿತಿ ಮುಖಂಡರು ಇಂದು ಪ್ರತಿಭಟನೆ ನಡೆಸಿದರು. ನಗರದ ಟಿಪ್ಪು ಸುಲ್ತಾನ್ ಉದ್ಯಾನವನದಲ್ಲಿ ರಾಜ್ಯ ಕಾಂಗ್ರೆಸ್ ಸರಕಾರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕಳೆದ ಒಂದು ವರ್ಷದಿಂದ ಹಣ ಬಾಕಿ ಇದೇ ಎಂದು ಆಕ್ರೋಶ ವ್ಯಕ್ತಪಡಿಸಿದರು. ಆಶಾ ಕಾರ್ಯಕರ್ತೆಯರಿಗೆ ಬಾಕಿ ಇರುವ 4 ತಿಂಗಳವರೆಗಿನ ಕೇಂದ್ರದ



ಪ್ರೋತ್ಸಾಹಧನ, 2 ತಿಂಗಳ ಗೌರವಧನವನ್ನು ಕೂಡಲೇ ಬಿಡುಗಡೆ ಮಾಡಬೇಕು ಉಪ ನಿರ್ದೇಶಕರು, ಇಎಮ್ ಎಸ್ ಆಶಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇವರ ಪತ್ರ ದಿನಾಂಕ ಏ.21 2026 ರಂತೆ 9 ವಿವಿಧ ಆಶಾ ಸೇವೆಗಳನ್ನು ಆಶಾ ನಿಧಿ ತಂತ್ರಾಂಶದಲ್ಲಿ ನಿಷ್ಕ್ರಿಯೆಗೊಳಿಸಿರುವುದಾಗಿ ಇದೆ. ಇದರಿಂದ ಪ್ರತೀ ಕಾರ್ಯಕರ್ತೆಗೆ ರೂ.500-1000 ವರೆಗೆ ಪ್ರೋತ್ಸಾಹಧನ ಕಡಿತವಾಗಲಿದೆ. ಈ ಸೇವೆಗಳನ್ನು ಮುಂದುವರೆಸಿ. ಪ್ರೋತ್ಸಾಹ ಧನ ನೀಡಲು ಕ್ರಮಕೈಗೊಳ್ಳಬೇಕು.ರಾಜ್ಯದಾದ್ಯಂತ ಕೇಂದ್ರದ ಪ್ರೋತ್ಸಾಹಧನ ಆಶಾ ಕಾರ್ಯಕರ್ತೆಯರು ಕೆಲಸ ಮಾಡಿದಷ್ಟು ಬರುತ್ತಿಲ್ಲ. ಈ ಸಮಸ್ಯೆ ಬಗೆಹರಿಸಿ. ಆಶಾಗಳಿಗೆ ಕೂಡಲೇ ಬಾಕಿ ಇರುವ ಪ್ರೋತ್ಸಾಹಧನ ನೀಡಬೇಕು.ಹಲವಾರು ವರ್ಷಗಳಿಂದ ಬಾಕಿ ಇರುವ ವಿವಿಧ ಕಂಪೋನೆಂಟ್‌ಗಳ ಹಣ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.ಹಲವಾರು ಆಶಾ ಕಾರ್ಯಕರ್ತೆಯರ ಗೌರವ ಧನ, ಪ್ರೋತ್ಸಾಹ ಧನ ಹಲವಾರು ತಿಂಗಳು ಕಡಿತ ಮಾಡಲಾಗಿದೆ. ಬಾಕಿ ಇರುವ ಕಾರ್ಯಕರ್ತೆಯರಿಗೆ ಹಣ ಬಿಡುಗಡೆ ಹಾಗೂ ಸಮಸ್ತ ಆ್ಯಪ್ ಮೂಲಕ ದಾಖಲಾತಿ ಮಾಡಿಸುವುದನ್ನು ಕೈಬಿಡಬೇಕು. ಮೌಲ್ಯಮಾಪನ ಹೆಸರಲ್ಲಿ ಆಶಾಗಳಿಗೆ ಆಗುತ್ತಿರುವ ಶೋಷಣೆ ನಿಲ್ಲಿಸಬೇಕು.

ನಿವೃತ್ತಿ ಆಗಿರುವ ಆಶಾಗಳಿಗೆ ಇರುವ ಇಡಿಗಂಟು ನೀಡಬೇಕು ಆಶಾ ಸುಗಮಕಾರರನ್ನು ಸೂಕ್ತ ವೇತನದೊಂದಿಗೆ ಮುಂದುವರೆಸಬೇಕು.

ಮೇಲಿನ ಸಮಸ್ಯೆಗಳ ಪರಿಹಾರಕ್ಕೆ ಕೂಡಲೆ ಸಂಘದ ಪದಾಧಿಕಾರಿಗಳೊಂದಿಗೆ ಕುಂದುಕೊರತೆ ಸಭೆ ಕರೆಯಬೇಕು.ಜನವರಿ 2025 ರಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಘೋಷಿಸಿದ ಕೇಂದ್ರ ಸರ್ಕಾರದ

3ನೇ ಪುಟ.....

ಮಾನ್ವಿ ತಹಸೀಲ್ ಕಚೇರಿಯಲ್ಲಿ ಮಹಾಸಾದ್ವಿ ಹೇಮರೆಡ್ಡಿ ಮಲ್ಲಮ್ಮ 604ನೇ ಜಯಂತಿ ಆಚರಣೆ



ಸಂಜೆ ಜ್ವಾಲೆ

ಮಾನ್ವಿ ಮೇ .11-

ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ 604ನೇ ಜಯಂತಿ ಅಂಗವಾಗಿ ತಹಸೀಲ್ ಕಚೇರಿ ಸಭಾಂಗಣದಲ್ಲಿ ಶಿವಶರಣೆ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸರಳವಾಗಿ ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಟಿಎಪಿಸಿಎಂಎಸ್ ಅಧ್ಯಕ್ಷ ಎಸ್.ತಿಮ್ಮಾರೆಡ್ಡಿ ಭೋಗಾವತಿ ಅವರು 14 ನೇ ಶತಮಾನದ ಶಿವಶರಣೆಯರಲ್ಲಿ ಪ್ರಜ್ವಲಿಸಿದ ಹೇಮರೆಡ್ಡಿ ಮಲ್ಲಮ್ಮ ದೈವಭಕ್ತಿ, ಕಾಯಕ ನಿಷ್ಠೆ, ದಾನ ಧರ್ಮದಿಂದ, ಆದರ್ಶ ಗೃಹಿಣಿಯಾಗುವ ಮೂಲಕ ಲೋಕ ಪ್ರಸಿದ್ದಿ ಬದುಕು ಎಂದೆಂದಿಗೂ ಅನುಕರಣೀಯ ಹಾಗೂ ಪಡೆದಿದ್ದರು. ಶ್ರೀಶೈಲ ಮಲ್ಲಿಕಾರ್ಜುನನ್ನು ಸಾಕ್ಷಾತ್ಕರಿಸಿಕೊಂಡ ಹೇಮರೆಡ್ಡಿ ಮಲ್ಲಮ್ಮನ ಮನುಕುಲಕ್ಕೆ ಆದರ್ಶವಾಗಿದೆ. ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಹಾಕಿಕೊಟ್ಟ ಭಕ್ತಿ ಮಾರ್ಗದಲ್ಲಿ ನಾವೆಲ್ಲರೂ ನಡೆಯೋಣ ಎಂದು ಹೇಳಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕ ಅಧ್ಯಕ್ಷ ಅರುಣಕುಮಾರ್

3ನೇ ಪುಟ.....

3 ಬಹುಹಳಿ ರೈಲ್ವೆ ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಸಮಿತಿಯ ಅನುಮೋದನೆ : ಡಾ.ಬಾಬುರಾವ್

ರಾಯಚೂರು,ಮೇ.11-

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ



ಆರ್ಥಿಕ ವ್ಯವಹಾರಗಳ ಕೇಂದ್ರ ಸಚಿವ ಸಂಪುಟ ಸಮಿತಿಯು ಮಂಗಳವಾರ ರೈಲ್ವೆ ಸಚಿವಾಲಯದ ಗುಂತಕಲ್‌ವಾಡಿ ಸೇರಿದಂತೆ ಮೂರು ಬಹುಹಳಿ (ಮಲ್ಟಿಟ್ರ್ಯಾಕಿಂಗ್) ಯೋಜನೆಗಳಿಗೆ ಅನುಮೋದನೆ ನೀಡಿದೆ. ಈ ಯೋಜನೆಗಳ ಒಟ್ಟು ವೆಚ್ಚ ₹23,437 ಕೋಟಿ ಆಗಿದೆ ಎಂದು ರೈಲ್ವೆ ಸಲಹಾ ಮಂಡಳಿ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ತಿಳಿಸಿದ್ದಾರೆ.

ಈ ಯೋಜನೆಗಳು ಮಧ್ಯಪ್ರದೇಶ, ರಾಜಸ್ಥಾನ, ಉತ್ತರ ಪ್ರದೇಶ, ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಜಾರಿಗೊಳ್ಳಲಿವೆ. ಈ ಯೋಜನೆಗಳಲ್ಲಿ ನಾಗ್ದಾಮಥುರಾ 3ನೇ ಮತ್ತು 4ನೇ ರೈಲು ಮಾರ್ಗ, ಗುಂತಕಲ್‌ವಾಡಿ 3ನೇ ಮತ್ತು 4ನೇ ಮಾರ್ಗ ಹಾಗೂ ಬರ್ಹ್ವಾಲ್‌ಸೀತಾಪುರ್ 3ನೇ ಮತ್ತು 4ನೇ ಮಾರ್ಗ ಸೇರಿವೆ. ಇವು 203031ರೊಳಗೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದಿದ್ದಾರೆ.

ಪಂಚಾಯತ್ ರಾಜ್ ಇಂಜಿನಿಯರಿಂಗ್ ಕಚೇರಿಯಲ್ಲಿ ರಾತ್ರಿ ಗುಂಡು -ತುಂಡಿನ ಪಾರ್ಟಿ...

ಸರ್ಕಾರಿ ಕಚೇರಿಯ ದುರುಪಯೋಗ, ಎಇಇ ಹನುಮಪ್ಪ ಆದವಾನಿ ಅಮಾನತಿಗೆ ಒತ್ತಾಯ

ಸಂಜೆ ಜ್ವಾಲೆ

ಲಿಂಗಸುಗೂರು,ಮೇ.10-

ತಾಲೂಕಿನ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕಚೇರಿಯಲ್ಲಿ ಶುಕ್ರವಾರ ರಾತ್ರಿ ವೇಳೆ ನಿವೃತ್ತ ನೌಕರರು ಹಾಗೂ ಇಲಾಖೆ ಸಿಬ್ಬಂದಿಗಳು ಸೇರಿಕೊಂಡು ತುಂಡು-ಗುಂಡಿನ ಪಾರ್ಟಿ ನಡೆಸಿರುವದು ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಸರ್ಕಾರಿ ಕಚೇರಿಯನ್ನು ವೈಯಕ್ತಿಕ ಉದ್ದೇಶಗಳಿಗೆ ಬಳಸಿಕೊಂಡಿರುವ ಘಟನೆ ಆಡಳಿತ ವ್ಯವಸ್ಥೆಯ ಮೇಲಿನ ಜನರ ನಂಬಿಕೆಗೆ ಧಕ್ಕೆಯುಂಟು ಮಾಡಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸರ್ಕಾರಿ ಕಚೇರಿಗಳು ಸಾರ್ವಜನಿಕರ ತೆರಿಗೆ ಹಣದಿಂದ ನಿರ್ವಹಣೆಯಾಗುವ ಆಡಳಿತ ಕೇಂದ್ರಗಳಾಗಿದ್ದು, ಅವುಗಳನ್ನು ಕಾನೂನುಬಾಹಿರ ಚಟುವಟಿಕೆಗಳಿಗೆ ಅಥವಾ ವೈಯಕ್ತಿಕ ಮನರಂಜನೆಗಾಗಿ ಬಳಸುವುದು ಕರ್ನಾಟಕ ನಾಗರಿಕ ಸೇವಾ ನಡವಳಿಕೆ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ, ಕಚೇರಿ ಆವರಣದಲ್ಲಿ ರಾತ್ರಿ ವೇಳೆ ಮದ್ಯಪಾನ ಕೂಟ, ಅಸಭ್ಯ ವರ್ತನೆ ಅಥವಾ ಅನಧಿಕೃತ ಸಭೆಗಳು ನಡೆದಿದ್ದರೆ ಅದು ''ಸರ್ಕಾರಿ ಆಸ್ತಿಯ ದುರುಪಯೋಗ'' ಹಾಗೂ ''ಸೇವಾ





ಶಿಸ್ತುಭಂಗ'' ಅಡಿ ಗಂಭೀರ ಅಪರಾಧವಾಗುತ್ತದೆ.

ಕಚೇರಿಯ ಭದ್ರತಾ ನಿಯಮಗಳನ್ನು ಮೀರಿ ನಿವೃತ್ತ ನೌಕರರು ಹಾಗೂ ಹೊರಗಿನ ವ್ಯಕ್ತಿಗಳಿಗೆ ರಾತ್ರಿ ವೇಳೆ ಪ್ರವೇಶ ಕಲ್ಪಿಸಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಕಚೇರಿಯ ದಾಖಲೆಗಳು, ತಾಂತ್ರಿಕ ದಾಖಲೆ ಪತ್ರಗಳು ಹಾಗೂ ಸಾರ್ವಜನಿಕ ಕಾಮಗಾರಿಗಳ ಮಾಹಿತಿಯ ಭದ್ರತೆ ಪ್ರಶ್ನಾರ್ಥಕವಾಗಿದ್ದು, ಈ ಘಟನೆಗೆ ಸಂಬಂಧಿಸಿದಂತೆ ಸಂಪೂರ್ಣ ತನಿಖೆ ನಡೆಸಬೇಕು ಎಂಬ ಒತ್ತಾಯ ಕೇಳಿಬಂದಿದೆ.

ಅಧಿಕಾರಿಗಳು ತಮ್ಮ ಅಧೀನ ಕಚೇರಿಯಲ್ಲಿ ಶಿಸ್ತು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ. ಆದರೂ ಇಂತಹ ಘಟನೆ ನಡೆದಿರುವುದು ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಹನುಮಪ್ಪ ಆದವಾನಿ ಅವರ ಆಡಳಿತ ವೈಫಲ್ಯವನ್ನು ತೋರಿಸುತ್ತದೆ ಮತ್ತು ಅವರ ದುರಾದಳಿತವನ್ನು ತೋರಿಸುತ್ತದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಕುರ್ಚಿ ಬದಲಾವಣೆ ಬಿಜೆಪಿಯವರ ಕಪೋಲ ಕಲ್ಪಿತ : ಡಿಕೆಶಿ ತಿರುಗೇಟು

ಸಂಜೆ ಜ್ವಾಲೆ

ಲಿಂಗಸುಗೂರು,ಮೇ.10-

ರಾಜ್ಯ ಸರ್ಕಾರ ಸ್ಥಿರವಾಗಿದೆ.ಕುರ್ಚಿ ಕಾದಾಟದ ಕುರಿತು ಹರಿದಾಡುತ್ತಿರುವ ರಾಜಕೀಯ ಚರ್ಚೆಗಳು ಬಿಜೆಪಿ ಕಪೋಲ ಕಲ್ಪಿತ ಎಂದು ಪ್ರಧಾನಿಗೆ ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ತಿರುಗೇಟು ನೀಡಿದರು. ರಾಜ್ಯ ಸರ್ಕಾರದ ಯಾವುದೇ ಕುರ್ಚಿ ಅಲುಗಾಡುತ್ತಿಲ್ಲ.ಸರ್ಕಾರ ಸಂಪೂರ್ಣ ಸ್ಥಿರವಾಗಿದೆ ಎಂದು ಸ್ಪಷ್ಟಪಡಿಸಿದರು.

ತಾಲೂಕಿನ ಮುದಗಲ್ ಪಟ್ಟಣದಲ್ಲಿ ಮಾಜಿ ಶಾಸಕ ಡಿ.ಎಸ್ ಹೂಲಗೇರಿ ಮಗಳ ಮದುವೆ ಕಾರ್ಯಕ್ರಮಕ್ಕೆ ಆಗಮಿಸಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು.ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಅಲುಗಾಡುತ್ತಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಹೇಳಿಕೆಗೆ ತೀವ್ರ ಪ್ರತಿಕ್ರಿಯೆ ನೀಡಿದರು.''ಪ್ರಧಾನ ಮಂತ್ರಿಗಳ ಕಣ್ಣಿಗೆ ಏನು ಕಾಣುತ್ತಿದೆಯೋ ನಮಗೆ ಗೊತ್ತಿಲ್ಲ.ರಾಜ್ಯ ಸರ್ಕಾರದ ಯಾವುದೇ ಕುರ್ಚಿಯೂ ಅಲುಗಾಡುತ್ತಿಲ್ಲ.ಎಲ್ಲಾ ಕುರ್ಚಿಗಳೂ ಗಟ್ಟಿಯಾಗಿವೆ,'' ಎಂದು ಡಿಸಿಎಂ ಸ್ಪಷ್ಟಪಡಿಸಿದರು.

ಬಿಜೆಪಿ ಅವರಿಗೆ ಅಭಿವೃದ್ಧಿ ಬೇಕಾಗಿಲ್ಲ, ಅದರ ಬಗ್ಗೆಯೂ ಮಾತಾಡುವದಿಲ್ಲ. ಸುಖಾ ಸುಮ್ಮನೆ ಆರೋಪ ಮಾಡುವದೇ ಬಿಜೆಪಿ ಅವರ ಸಂಸ್ಕೃತಿ ಆಗಿದೆ. ದೇಶದ ಪ್ರಧಾನಿ ಆದವರು ಒಂದು ಸ್ಥಿರ ಸರ್ಕಾರದ ಬಗ್ಗೆ ಅರೋಗ್ಯ ಮಾಡುವದು ಅವರ ಯೋಗ್ಯತೆಗೆ



ತಕ್ಕದಲ್ಲಿ ಎಂದು ಕುಟುಕಿದರು.

ಇದೇ ವೇಳೆ ಸಚಿವ ಡಿ, ಸುಧಾಕರ್ ಅವರ ನಿಧನ ಕುರಿತು ಆಳವಾದ ಸಂತಾಪ ವ್ಯಕ್ತಪಡಿಸಿದ ಡಿ.ಕೆ. ಶಿವಕುಮಾರ್, ''ಸುಧಾಕರ್ ಅವರು ನನಗೆ ಅತ್ಯಂತ ಆತ್ಮೀಯರು. ಮಂಡಿ ನೋವಿನ ಹಿನ್ನೆಲೆಯಲ್ಲಿ ಒಂದು ತಿಂಗಳ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದರು. ಶಸ್ತ್ರಚಿಕಿತ್ಸೆ ಯ ಬಳಿಕ ಡಿಸ್ಚಾರ್ಜ್ ಆಗಬೇಕಾಗಿದ್ದ ಸಮಯದಲ್ಲಿ ಲಂಗ್ ಇನ್ಫೆಕ್ಷನ್ ಕಾಣಿಸಿಕೊಂಡು ಆರೋಗ್ಯ ಹದಗೆಟ್ಟಿತು.

ವೈದ್ಯರು ಹಾಗೂ ಸರ್ಕಾರದ ಮಟ್ಟದಲ್ಲಿ ಎಲ್ಲ ರೀತಿಯ ಪ್ರಯತ್ನ ಮಾಡಿದರೂ ಅವರನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಸುಧಾಕರ್ ಅವರು ಸಹಕಾರ ಕ್ಷೇತ್ರದಲ್ಲಿ ಮಹತ್ವದ ಸೇವೆ ಸಲ್ಲಿಸಿದ್ದನ್ನು ಸ್ಮರಿಸಿದ ಡಿಸಿಎಂ, ''ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ, ಅಪೆಕ್ಸ್ ಬ್ಯಾಂಕ್ ನಿರ್ದೇಶಕರಾಗಿ ಹಲವು ವರ್ಷ ಸೇವೆ ಸಲ್ಲಿಸಿದ್ದರು.ಚಿತ್ರದುರ್ಗ ಜಿಲ್ಲೆಯ ಅಪ್ಪರ್ ಭದ್ರಾ ಯೋಜನೆಗಾಗಿ ಜಿಲ್ಲೆಯ ಎಲ್ಲಾ ಶಾಸಕರನ್ನು ಒಗ್ಗೂಡಿಸಿ ಕೆಲಸ ಮಾಡಿದ್ದರು. ಯೋಜನೆ ಉದ್ಘಾಟನೆಗೂ ಮುನ್ನವೇ ಅವರು ನಮ್ಮನ್ನು ಅಗಲಿರುವುದು ನೋವು ತಂದಿದೆ ಎಂದರು.

ಸಿಎಂ ಅವರನ್ನು ಭೇಟಿಯಾದಾಗಲೆಲ್ಲಾ ಜಿಲ್ಲೆಯ ಅಭಿವೃದ್ಧಿ, ಬಡವರ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದರು. ಜೈನ್ ಸಮುದಾಯ ಸೇರಿದಂತೆ ಎಲ್ಲಾ ಸಮುದಾಯಗಳನ್ನು ಜೊತೆಗೂಡಿಸಿಕೊಂಡು ಹೋಗುವ ಗುಣ ಅವರದ್ದಾಗಿತ್ತು. ಪಕ್ಷಕ್ಕೆ, ಸರ್ಕಾರಕ್ಕೆ ಹಾಗೂ ಜಿಲ್ಲೆಗೆ ಅವರ ಅಗಲಿಕೆ ದೊಡ್ಡ ನಷ್ಟ,ಎಂದು ಹೇಳಿದರು.

ಅವರಿಗೆ ಎರಡು ಖಾತೆಗಳನ್ನು ನೀಡಲಾಗಿತ್ತು. ಪಕ್ಷ ಮತ್ತು ಸರ್ಕಾರಕ್ಕಾಗಿ ತ್ಯಾಗ ಮನೋಭಾವದಿಂದ ಕೆಲಸ ಮಾಡಿದರು. ರಾಮಲಿಂಗಾರೆಡ್ಡಿಯವರಿಗೆ ಒಂದು ಖಾತೆ ಬಿಟ್ಟುಕೊಟ್ಟಿದ್ದರು. ದೊಡ್ಡ ಹೃದಯದ ನಾಯಕನನ್ನು ನಾವು ಕಳೆದುಕೊಂಡಿದ್ದೇವೆ ಎಂದರು.ಸೋಮವಾರ ಚಿತ್ರದುರ್ಗದಲ್ಲಿ ಧಾರ್ಮಿಕ ವಿಧಿವಿಧಾನಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ.

ಈ ಸಂದರ್ಭದಲ್ಲಿ ಸಚಿವ ಶಿವರಾಜ ತಂಗಡಗಿ, ಮಾಜಿ ಸಚಿವ ಅಮರೇಗೌಡ ಬಯ್ಯಾಪೂರ, ಮಸ್ಕಿ ಶಾಸಕ ಬಸನಗೌಡ ತುರ್ವಿಹಾಳ, ವಿಧಾನ ಪರಿಷತ್ ಸದಸ್ಯರಾದ ಶರಣಗೌಡ ಪಾಟೀಲ್ ಬಯ್ಯಾಪೂರ, ಬಸನಗೌಡ ಬಾದರ್ಲಿ ಸೇರಿದಂತೆ ಇದ್ದರು.

ರೈತರಿಂದ ಬಿಳಿಜೋಳ ಖರೀದಿಸುವ ಪ್ರಕ್ರಿಯೆ ಪ್ರಾರಂಭ: ಉಪ ನಿರ್ದೇಶಕರಾದ ನಜೀರ್ ಅಹ್ಮದ್

ಸಂಜೆ ಜ್ವಾಲೆ

ರಾಯಚೂರು ಮೇ.11-

ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ವತಿಯಿಂದ 2025-26ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಹಿಂಗಾರು ಋತುವಿನಲ್ಲಿ ನೋಂದಣಿ ಮಾಡಿಕೊಂಡಿರುವ ರೈತರಿಂದ ಬಿಳಿಜೋಳವನ್ನು ಖರೀದಿಸುವ ಪ್ರಕ್ರಿಯೆಯನ್ನು ಆರಂಭಿಸಲಾಗಿದ್ದು, ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಲಾದ ಅನುಕ್ರಮವಾರು ರೈತರಿಂದ ಖರೀದಿಯನ್ನು ಮಾಡಲಾಗುವುದು ಎಂದು ಜಿಲ್ಲಾ ಟಾಸ್ಕ್‌ಫೋರ್ಸ್ ಸಮಿತಿ ಸದಸ್ಯ ಕಾರ್ಯದರ್ಶಿಗಳು ಆಗಿರುವ ಆಹಾರ



ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹ್ಮದ್ ಅವರು ತಿಳಿಸಿದ್ದಾರೆ.

ರೈತರು ಈಗಾಗಲೇ ತಮ್ಮ ಎಫ್‌ಐಡಿಯೊಂದಿಗೆ ನೋಂದಣಿ ಮಾಡಿಕೊಂಡಿದ್ದು, ದಿನಾಂಕ: 11.05.2026 ರಿಂದ ಜಿಲ್ಲೆಯಲ್ಲಿರುವ ಎಲ್ಲಾ ಖರೀದಿ ಕೇಂದ್ರಗಳಲ್ಲಿ ಖರೀದಿ ಪ್ರಕ್ರಿಯೆಯನ್ನು ಆರಂಭಿಸಲಾಗುತ್ತಿದೆ. ಖರೀದಿ ಕೇಂದ್ರಗಳಲ್ಲಿ ನೋಂದಾಯಿಸಲಾದ ಅನುಕ್ರಮವಾರು ರೈತರಿಂದ ಖರೀದಿಯನ್ನು ಮಾಡಲಾಗುವುದು. ರೈತರು ಆತುರ ಪಡದೇ ಅಥವಾ ನೂಕು ನುಗ್ಗಲು ಮಾಡದೇ ತಮಗೆ ಖರೀದಿ ಕೇಂದ್ರದಿದ ನೀಡಲಾಗುವ ದಿನಾಂಕವಾರು ತಾವು ಬೆಳೆದಿರುವ ಜೋಳವನ್ನು ಸರಬರಾಜು ನೀಡುವುದು. ಅಲ್ಲದೇ ಖರೀದಿ ಕೇಂದ್ರಕ್ಕೆ ಬರುವ ಮುಂಚಿತವಾಗಿಯೇ ದಾಸ್ತಾನಿನ ಗುಣಮಟ್ಟ, ತೇವಾಂಶ ಹಾಗೂ ಸ್ವಚ್ಛತೆಯ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.

3ನೇ ಪುಟ.....



ಸುಂಕ್ಲಮ್ಮ ದೇವಿ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಗೆ ಶಾಸಕ ಬಿ.ಎಂ.ನಾಗರಾಜ ಅಡಿಗಲ್ಲು

ಸಿರುಗುಪ್ಪ,ಮೇ.11-


ಕರ್ನಾಟಕ ಸರ್ಕಾರದ 2025-26ನೇ ಸಾಲಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆ (ಸಿಎಂಐಡಿಪಿ) ಅಡಿಯಲ್ಲಿ ಮಂಜೂರಾದ 25 ಲಕ್ಷ ರೂ. ವೆಚ್ಚದ ಶ್ರೀ ಸುಂಕ್ಲಮ್ಮ ದೇವಿ ದೇವಸ್ಥಾನ ಜೀರ್ಣೋದ್ಧಾರ ಕಾಮಗಾರಿಗೆ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಶಾಸಕ ಬಿ.ಎಂ. ನಾಗರಾಜ ಅಡಿಗಲ್ಲು ನೆರವೇರಿಸಿದರು.

ನಗರದ 3ನೇ ವಾರ್ಡ್ ದೇಶನೂರು ರಸ್ತೆಯಲ್ಲಿರುವ ದೇವಸ್ಥಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ತಾಲೂಕು ಗಂಗಾಮತಸ್ಥ ಸಂಘದ ಪದಾಧಿಕಾರಿಗಳು ಶಾಸಕ ಬಿ.ಎಂ.ನಾಗರಾಜ ಅವರನ್ನು ಆತ್ಮೀಯವಾಗಿ ಸ್ವಾಗತಿಸಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಜಿಲ್ಲಾ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಎನ್. ಕರಿಬಸಪ್ಪ, ರೈತ ಸಹಕಾರ ಸಂಘದ ಅಧ್ಯಕ್ಷ ನಾಂಚಾರಯ್ಯ, ನಗರಸಭೆ ಮಾಜಿ ಅಧ್ಯಕ್ಷ ಕೆ. ಕೃಷ್ಣ, ಮಾಜಿ ಶಾಸಕ ಎಂ. ದೊಡ್ಡನಗೌಡ ಅವರ ಪುತ್ರ ಮರಿ ರಾಜೇಗೌಡ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ದಮ್ಮೂರು ಸೋಮಪ್ಪ, ನಗರಸಭೆ ಮಾಜಿ ಸದಸ್ಯರಾದ ಪೂಜಾರಿ ಪ್ಯಾಟೆಪ್ಪ, ಗೋಪಾಲ, ಪೂಜಾರಿ ಮಲ್ಲಿಕಾರ್ಜುನ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಇದೇ ವೇಳೆ ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷರು, ತಾಲೂಕು ಗಂಗಾಮತಸ್ಥ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು, ಎಸ್. ಮುದುಕಪ್ಪ, ಸುಂಕಪ್ಪ, ಅಮಾಜೆಪ್ಪ, ಅನ್ಸಾರಿ ಇಸಾಕ್, ಸಲ್ವಾತ್ ಉದ್ದೀನ್, ಕಾಯಿಪಲ್ಲೆ ಆರ್. ನಾಗರಾಜ, ಬಿ. ವೆಂಕಟೇಶ್, ಹೆಚ್. ಗಣೇಶ್, ದೇಶನೂರು ನಾಗರಾಜ್, ಮೀರ್ ಹುಸೇನ್, ಎಸ್. ಮೋದಿನ್, ಚಿದಾನಂದ ರಾಯುಡು, ಜಾಜಿ ರಾಮಣ್ಣ, ಮುಲ್ಲಾ ದಾದಾ ಖಲಂದರ್, ಪರಶುರಾಮ್, ನಗರಸಭೆ ಪೌರಾಯುಕ್ತ ಗಂಗಾಧರ, ಜಿಲ್ಲಾ ಪಂಚಾಯತ್ ಇಂಜಿನಿಯರ್ ಕಾಂತರಾಜ್, ಗುತ್ತಿಗೆದಾರ ಪ್ರಹಲ್ಲಾದ ರೆಡ್ಡಿ, ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿ ಸೇರಿದಂತೆ ಅನೇಕ ಮುಖಂಡರು ಭಾಗವಹಿಸಿದ್ದರು.

ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ



ಕಲಬುರಗಿ,ಮೇ.11-

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಎಸ್.ಎಂ.ಪಂಡಿತ್ ರಂಗ ಮಂದಿರದಲ್ಲಿ ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿಯನ್ನು ರವಿವಾರ ಸರಳ ಹಾಗೂ ಸಾಂಕೇತಿಕವಾಗಿ ಆಚರಿಸಲಾಯಿತು.

ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ ಅವರ ಅಕಾಲಿಕ ನಿಧನದ ಹಿನ್ನೆಲೆಯಲ್ಲಿ ಕಾರ್ಯಕ್ರಮ ಆರಂಭಕ್ಕೂ ಮುನ್ನ ಶೋಕಾಚರಣೆ ನಡೆಸಿ, ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ದುಃಖದ ವಾತಾವರಣದ ಹಿನ್ನೆಲೆ ಪೂರ್ವನಿಗದಿಯಾಗಿದ್ದ ಜಯಂತಿ ಕಾರ್ಯಕ್ರಮವನ್ನು ಅತ್ಯಂತ ಸರಳ ರೀತಿಯಲ್ಲಿ ನಡೆಸಲಾಯಿತು. ಈ ವೇಳೆ ಗಣ್ಯರು ಮಹಾಸಾಧ್ವಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಗೌರವ ನಮನ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ಎ. ನಾಸಿ, ರೆಡ್ಡಿ ಸಮಾಜದ ಅಧ್ಯಕ್ಷ ಡಾ. ಎಸ್.ಬಿ. ಕಾಮರೆಡ್ಡಿ, ಹೊಸಪೇಟೆ ಸರ್ಕಾರಿ ಪ್ರೌಢಶಾಲೆಯ ಮುಖ್ಯ ಗುರು ಶೇಖರ ಗಿರಡ್ಡಿ ಇಳಕಲ್ ಸೇರಿದಂತೆ ಸಮಾಜದ ಮುಖಂಡರಾದ ಡಾ. ವಿಶ್ವನಾಥ್ ರೆಡ್ಡಿ, ಚನ್ನಾರೆಡ್ಡಿ ಪಾಟೀಲ್, ಡಾ. ವೀರಭದ್ರಪ್ಪ ರೆಡ್ಡಿ, ಸಿದ್ದರಾಮರೆಡ್ಡಿ ಬಲ್ಕಲ್, ಬಸು ಸೂಗೂರ, ಮಹೇಶ್ ರೆಡ್ಡಿ, ಅನೂಪ ರೆಡ್ಡಿ, ವೈಭವ ರೆಡ್ಡಿ, ವೆಂಕಟ್ ರೆಡ್ಡಿ, ಮಹೇಶ ಹೊಸೂರಕರ್ ಜಿ.ಜಿ. ವಣಿಕ್ಯಾಳ, ಶೇಖರ ರೆಡ್ಡಿ ಮತ್ತಿತರರು ಉಪಸ್ಥಿತರಿದ್ದರು.



ನಿಡುಗುರ್ತಿ ಅರಿವು ಕೇಂದ್ರ ಮಧ್ಯಾಹ್ನದ ಬಳಿಕ ಬಂದ್ : ಸಾರ್ವಜನಿಕರ ಆಕ್ರೋಶ

ಸಂಡೂರು,ಮೇ.11-

ಜಿಲ್ಲೆಯ ಸಂಡೂರು ತಾಲೂಕಿನ ನಿಡುಗುರ್ತಿ ಗ್ರಾಮ ಪಂಚಾಯಿತಿ ಕೇಂದ್ರದ ಆವರಣದಲ್ಲಿರುವ ಅರಿವು ಕೇಂದ್ರ (ಗ್ರಂಥಾಲಯ) ಕಳೆದ ಏಪ್ರಿಲ್ ಮತ್ತು ಮೇ ತಿಂಗಳಿಂದ ಸಾರ್ವಜನಿಕರ ಅಸಮಾಧಾನಕ್ಕೆ ಕಾರಣವಾಗಿದೆ.

ಕಲ್ಯಾಣ ಕರ್ನಾಟಕ ಭಾಗದ ಸರ್ಕಾರಿ ಕಚೇರಿಗಳು ಬೆಳಿಗ್ಗೆ 8 ಗಂಟೆಯಿಂದ ಮಧ್ಯಾಹ್ನ 1:30ರ ವರೆಗೆ ಕಾರ್ಯನಿರ್ವಹಿಸುತ್ತಿದ್ದರೂ, ಗ್ರಂಥಾಲಯಗಳಿಗೆ ಪ್ರತ್ಯೇಕ ಆದೇಶ ಇಲ್ಲದಿದ್ದರೂ ನಿಡುಗುರ್ತಿ ಅರಿವು ಕೇಂದ್ರದ ಗ್ರಂಥಪಾಲಕರು ಇದೇ ವೇಳಾಪಟ್ಟಿಯನ್ನು ಅನುಸರಿಸುತ್ತಿದ್ದಾರೆ ಎನ್ನಲಾಗಿದೆ. ಈ ಕುರಿತು ಸಾರ್ವಜನಿಕರು ಸಂಬಂಧಪಟ್ಟ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ''ಅರಿವು ಕೇಂದ್ರದ ಸಮಯ ಪಾಲನೆ ಪ್ರತ್ಯೇಕವಾಗಿದ್ದು, ಅವರು ತಮ್ಮ ನಿಯಮಾನುಸಾರ ಕಾರ್ಯನಿರ್ವಹಿಸುತ್ತಾರೆ'' ಎಂದು ಸ್ಪಷ್ಟನೆ ನೀಡಿರುವುದಾಗಿ ತಿಳಿದುಬಂದಿದೆ.

ಗ್ರಂಥಪಾಲಕರ ತಾಲೂಕು ಅಧ್ಯಕ್ಷ ಶಿವಕುಮಾರ್ ದೂರವಾಣಿ ಮೂಲಕ ಪ್ರತಿಕ್ರಿಯಿಸಿ, ಮುಂದಿನ ದಿನಗಳಲ್ಲಿ ನಿಯಮಿತ ಸಮಯ ಪಾಲನೆ ಮಾಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಆದರೆ ಮಧ್ಯಾಹ್ನದ ನಂತರವೂ ಅರಿವು ಕೇಂದ್ರ ಮುಚ್ಚಿರುವುದರಿಂದ ವಿದ್ಯಾರ್ಥಿಗಳು, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ಯುವಕರು ಹಾಗೂ ಓದುಪ್ರಿಯರು ನಿರಾಸೆಯಿಂದ ಹಿಂದಿರುಗುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಲಾಗಿದೆ.

ಗ್ರಂಥಪಾಲಕರ ಬೇಜವಾಬ್ದಾರಿ ಹಾಗೂ ಸಮಯ ಪಾಲನೆಯ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡು ಅರಿವು ಕೇಂದ್ರವನ್ನು ನಿಯಮಿತ ವೇಳಾಪಟ್ಟಿಯಂತೆ ನಡೆಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಹೇಮರೆಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಚಿತ್ತಾಪುರ ,ಮೇ.11-

ಪಟ್ಟಣದ ಪ್ರಜಾ ಸೌಧದ ಆವರಣದಲ್ಲಿ ಮಾತೋಶ್ರೀ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮರವರ ಜಯಂತಿ ಆಚರಣೆ ಮಾಡಲಾಯಿತು.

ಇದೇ ವೇಳೆ ತಹಶೀಲ್ದಾರ್ ನಾಗಯ್ಯಸ್ವಾಮಿ ಹಿರೇಮಟ ಅವರು ಹೇಮರೆಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾಲಾರ್ಪಣೆ ಮಾಡಿದರು.

ಈ ಸಂದರ್ಭದಲ್ಲಿ ರೆಡ್ಡಿ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ್ ಇಜಾರ್,



ಮುಖಂಡರಾದ ಶ್ರೀ ಜಗಣ್ಣಗೌಡ ರಾಮತೀರ್ಥ, ಭೀಮರೆಡ್ಡಿ ಗಡೆಶ್ವರ್, ನಾಗರೆಡ್ಡಿ ಗೋಪಸೆನ್, ಆಯಿಲ್

ರೆಡ್ಡಿ ಯರಗಲ್, ಸಿದ್ದರಾಮ ರೆಡ್ಡಿ ಪಾಲಪ್, ರುದ್ರಗೌಡ ಇಜಾರ್, ಶ್ರೀನಿವಾಸ್ ರೆಡ್ಡಿ ಯರಗಲ್, ಮಲ್ಲುಗೌಡ ಅಲ್ಲೂರ್, ಬಸವರಾಜ ಪಾಟೀಲ್ ಅಲ್ಲೂರ್, ಬಸವರಾಜ್ ಗೌಡ ಅಲ್ಲೂರ್ ಸೇರಿದಂತೆ ಇತರರು ಇದ್ದರು.

ಕಾರ್ಮಿಕರ ಹಕ್ಕು ಕಸಿಯುವ ಕಾನೂನುಗಳಿಗೆ ತೀವ್ರ ವಿರೋಧ : ಎಸ್.ವರಲಕ್ಷ್ಮೀ

ಹೊಸಪೇಟೆ/ ವಿಜಯನಗರ, ಮೇ.11-

ಕಾರ್ಮಿಕರ ಶ್ರಮಕ್ಕೆ ತಕ್ಕ ವೇತನ ಹಾಗೂ ಹಕ್ಕುಗಳನ್ನು ಕಿತ್ತುಕೊಳ್ಳಲು ಯಾವುದೇ ಸರ್ಕಾರಕ್ಕೂ ಅವಕಾಶ ನೀಡುವುದಿಲ್ಲ ಎಂದು ಸಿಐಟಿಯು () ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್.ವರಲಕ್ಷ್ಮೀ ಆಕ್ರೋಶ ವ್ಯಕ್ತಪಡಿಸಿದರು.

ಹೊಸಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಸರ್ಕಾರ ಜಾರಿಗೆ ತರಲು ಮುಂದಾಗಿರುವ ಹೊಸ ಕಾರ್ಮಿಕ ಸಂಹಿತೆಗಳು ಕಾರ್ಮಿಕ ವಿರೋಧಿ ಹಾಗೂ ಬಂಡವಾಳಶಾಹಿ ಪರವಾಗಿವೆ ಎಂದು ಆರೋಪಿಸಿದರು.

ಬಿಜೆಪಿ ಸರ್ಕಾರ ಜನರ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದಿಲ್ಲ. ಹಿಂಬಾಗಿಲಿನ ರಾಜಕೀಯದ ಮೂಲಕ ಅಧಿಕಾರಕ್ಕೆ ಬಂದು ಇದೀಗ ಕಾರ್ಮಿಕರ ಹಕ್ಕುಗಳ ಮೇಲೆಯೇ ದಾಳಿ ನಡೆಸುತ್ತಿದೆ ಎಂದು ಟೀಕಿಸಿದರು.

ಒಕ್ಕೂಟದ ನಿಯಮಾವಳಿಗಳ ಆಧಾರದ ಮೇಲೆ ಹೋರಾಟ



ನಡೆಸಲಾಗುವುದು ಎಂದು ತಿಳಿಸಿದ ಅವರು, 2026ರ ಮೇ 9ರಂದು ನಾಲ್ಕು ಕಾರ್ಮಿಕ ಕೋಡ್‌ಗಳಿಗೆ ನೋಟಿಫಿಕೇಶನ್ ಹೊರಡಿಸಿರುವುದು ಕಾರ್ಮಿಕ ವರ್ಗದಲ್ಲಿ ಆತಂಕ ಮೂಡಿಸಿದೆ ಎಂದರು.

ಹಿಂದೆ 20 ಕಾರ್ಮಿಕರಿಗೆ ಒಂದು ಯುನಿಟ್ ಎಂದು ಪರಿಗಣಿಸಲಾಗುತ್ತಿತ್ತು. ಈಗ ಅದನ್ನು 50 ಮಂದಿಗೆ ಏರಿಕೆ ಮಾಡಿರುವುದರಿಂದ 49 ಕಾರ್ಮಿಕರು ಕೆಲಸ ಮಾಡಿದರೂ ಅನೇಕ ಕಾನೂನು ಸೌಲಭ್ಯಗಳಿಂದ ವಂಚಿತರಾಗುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಇದೇ ವೇಳೆ 8 ಗಂಟೆಗಳ ಕೆಲಸದ ಅವಧಿಯನ್ನು 12 ಗಂಟೆಗೆ ಹೆಚ್ಚಿಸುವುದು ಹಾಗೂ ಮಹಿಳೆಯರಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವ ನಿಯಮ ಜಾರಿಗೆ ತರಲು ಸರ್ಕಾರ ಮುಂದಾಗಿರುವುದು ಕಾರ್ಮಿಕರ ಮೇಲೆ ಹೆಚ್ಚುವರಿ ಒತ್ತಡ ಹೇರುವ ಕ್ರಮವಾಗಿದೆ ಎಂದು ಆರೋಪಿಸಿದರು.

''ಮಾಲೀಕರು ಹೇಗೆ ಬೇಕಾದರೂ ಕಾರ್ಮಿಕರನ್ನು ದುಡಿಸಿಕೊಳ್ಳಲು ಅವಕಾಶ ಕಲ್ಪಿಸುವ ರೀತಿಯ ಕಾನೂನುಗಳನ್ನು ಸರ್ಕಾರ ಜಾರಿಗೆ ತರುತ್ತಿದೆ. ಇದಕ್ಕೆ ನಮ್ಮ ಸಂಘಟನೆ ತೀವ್ರ ವಿರೋಧ ವ್ಯಕ್ತಪಡಿಸುತ್ತದೆ'' ಎಂದು ಹೇಳಿದರು.

ಅಂಗನವಾಡಿ ಕಾರ್ಮಿಕರನ್ನೂ ಕಾರ್ಮಿಕ ಕಾನೂನುಗಳ ವ್ಯಾಪ್ತಿಗೆ ತರಬೇಕು ಎಂದು ಒತ್ತಾಯಿಸಿದ ಅವರು, ಕಾರ್ಮಿಕ ಸಂಘಟನೆಗಳ ಅಭಿಪ್ರಾಯಗಳನ್ನು ಕಡೆಗಣಿಸಿ ಬಂಡವಾಳಶಾಹಿಗಳ ಒತ್ತಾಯದ ಮೇರೆಗೆ ಸರ್ಕಾರ ನಿರ್ಧಾರ ಕೈಗೊಳ್ಳುತ್ತಿರುವುದು ಖಂಡನೀಯ ಎಂದು ಹೇಳಿದರು.

ಅಲೆಮಾರಿ ಕಾಲೋನಿಗೆ ಭೇಟಿ ನೀಡಿ ಸಮಸ್ಯೆ ಆಲಿಸಿದ ವೈ.ಶಿವಕುಮಾರ

ಕಂಪ್ಲಿ,ಮೇ.11-

ಪಟ್ಟಣದ 22ನೇ ವಾರ್ಡಿನ ಅಲೆಮಾರಿ ಕಾಲೋನಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಾಮಾಜಿಕ ನ್ಯಾಯ ಸಮಿತಿ ವಿಭಾಗದ ರಾಜ್ಯ ಉಪಾಧ್ಯಕ್ಷ ವೈ. ಶಿವಕುಮಾರ ಶನಿವಾರ ಭೇಟಿ ನೀಡಿ, ಅಲ್ಲಿನ ನಿವಾಸಿಗಳ ಕುಂದುಕೊರತೆಗಳನ್ನು ಆಲಿಸಿದರು.

ನಂತರ ಮಾತನಾಡಿದ ಅವರು, ರಾಜ್ಯ ಸರ್ಕಾರ ಜನಪರ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುತ್ತಿದ್ದು, ಅಲೆಮಾರಿ ಸಮುದಾಯಕ್ಕೂ ಸರ್ಕಾರದ ಯೋಜನೆಗಳು ಮತ್ತು ಮೂಲಭೂತ ಸೌಲಭ್ಯಗಳನ್ನು ತಲುಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಕೆಲಸ ಮಾಡಲಾಗುತ್ತಿದೆ ಎಂದರು.

ಈಗಾಗಲೇ ಅಲೆಮಾರಿ ಸಮುದಾಯದ ನಿರ್ಗತಿಕರಿಗೆ 20 ಸಾವಿರ ತಾಡಪಾಲುಗಳನ್ನು ವಿತರಿಸಲಾಗಿದ್ದು, ಅದರಲ್ಲೂ ಜಿಲ್ಲೆಯಲ್ಲಿ 11 ಸಾವಿರ ಕುಟುಂಬಗಳಿಗೆ ನೆರವು ನೀಡಲಾಗಿದೆ.

ಅಲೆಮಾರಿ ಸಮುದಾಯಕ್ಕೆ ಶಾಶ್ವತ ನೆಲೆ ಕಲ್ಪಿಸುವ ಉದ್ದೇಶದಿಂದ ನಿವೇಶನ, ಮನೆ,



ಜಮೀನು, ತಾಲೂಕು ಮಟ್ಟದಲ್ಲಿ ಸಮುದಾಯ ಭವನ ಹಾಗೂ ಜಿಲ್ಲೆಯಲ್ಲಿ ಪ್ರತ್ಯೇಕ ವಸತಿ ಶಾಲೆ ಸ್ಥಾಪನೆಗೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಭರವಸೆ ನೀಡಿದರು.

ಕರ್ನಾಟಕ ರಾಜ್ಯ ಅಲೆಮಾರಿ ಅರೆಅಲೆಮಾರಿ ವಿಮುಕ್ತ ಬುಡಕಟ್ಟುಗಳ ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಚ್.ಪಿ. ಶಿಕಾರಿ ರಾಮು ಮಾತನಾಡಿ, ಅಲೆಮಾರಿ ಸಮುದಾಯದ ಜೀವನದ ಕಷ್ಟಗಳನ್ನು ಅರಿತ ವ್ಯಕ್ತಿಯಾಗಿ ಶಿವಕುಮಾರ ಸಮಾಜದ ಪರವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಅಲೆಮಾರಿ ನಿಗಮಕ್ಕೆ 500 ಕೋಟಿ ರೂ. ಅನುದಾನ ಮೀಸಲಿಡಬೇಕು. ಸಮುದಾಯದ ಅಭಿವೃದ್ಧಿಗೆ ಶಾಶ್ವತ ನಿವೇಶನ, ಮನೆ ಮತ್ತು ಜಮೀನು ಒದಗಿಸಬೇಕು.

ಜೊತೆಗೆ ಬಳ್ಳಾರಿ ಜಿಲ್ಲೆಯಲ್ಲಿ ಅಲೆಮಾರಿ ಮಕ್ಕಳಿಗಾಗಿ ಪ್ರತ್ಯೇಕ ವಸತಿ ಶಾಲೆ ಹಾಗೂ ಪ್ರತಿ ತಾಲೂಕಿನಲ್ಲಿ ಸಮುದಾಯ ಭವನ ನಿರ್ಮಿಸಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮ್ಯಾದಾರ್ ಸಮಾಜದ ಅಧ್ಯಕ್ಷ ಎಂ.ಗಾಳಿ ಕುಮಾರ, ತಾಲೂಕು ಸುಡಗಾಡು ಸಿದ್ದರ ಸಮಾಜದ ಅಧ್ಯಕ್ಷ ಸಣ್ಣ ಹುಲುಗಪ್ಪ, ಹಕ್ಕಿಪಿಕ್ಕಿ ಅಭಿವೃದ್ಧಿ ಸಂಘದ ಜಿಲ್ಲಾ ಉಪಾಧ್ಯಕ್ಷ ಟಿ.ಬಾಬು, ಕರ್ನಾಟಕ ರಾಜ್ಯ ಸಿಂಧೋಳ್ ಸಮಾಜದ ಗೌರವಾಧ್ಯಕ್ಷ ರಾಹುಲ್ ನಾಗಪ್ಪ, ಮುಖಂಡರಾದ ಮಾರೆಪ್ಪ, ಯಲ್ಲಮ್ಮ, ದುರುಗಮ್ಮ, ನಾಗಮ್ಮ, ಕಾವೇರಿ ಸೇರಿದಂತೆ ಅಲೆಮಾರಿ ಸಮಾಜದವರು ಉಪಸ್ಥಿತರಿದ್ದರು.

ಚಿತ್ತಾಷಹಾವಲಿ ದರ್ಗಾ ಉರೂಸ್: ವಿಜೃಂಭಣೆಯಿಂದ ನಡೆದ ಸಂದಲ್ ಮೆರವಣಿಗೆ



ಚಿತ್ತಾಪುರ,ಮೇ.11-

ಪಟ್ಟಣದ ಐತಿಹಾಸಿಕ ಹಿಂದು-ಮುಸ್ಲಿಂ ಭಾವೈಕ್ಯತೆಯ ಸೂಫಿ ಸಂತ ಹಜರತ್ ಚಿತ್ತಾಷಹಾವಲಿ ದರ್ಗಾದ 799ನೇ ಜಾತ್ರಾ ಮಹೋತ್ಸವ (ಉರೂಸ್) ಅಂಗವಾಗಿ ನಡೆದ ಗಂಧದ (ಸಂದಲ್) ಮೆರವಣಿಗೆ ಭಕ್ತಸಮೂಹದ ನಡುವೆ ಬಹು ವಿಜೃಂಭಣೆಯಿಂದ ಜರುಗಿತು.

ಶನಿವಾರ ಬೆಳಗ್ಗೆ ಹಿಂದು ಭಕ್ತ ಬಳ್ಳಾ ಅವರ ಮನೆಯಲ್ಲಿ ಸಾಮೂಹಿಕ ಪ್ರಾರ್ಥನೆ (ಪಾತೆಹಾ) ನಡೆಯಿತು. ವಿಶೇಷ ಪೂಜೆ ನೆರವೇರಿಸಿ ಪ್ರಸಾದ ವಿತರಿಸಲಾಯಿತು. ರಾತ್ರಿ 10 ಗಂಟೆಗೆ ಬಳ್ಳಾ ಅವರ ಮನೆಯಿಂದ ಆರಂಭವಾದ ಗಲಾಫ್ ಮೆರವಣಿಗೆ ಮುತುವಲ್ಲಿ ಸೈಯದ್ ಮಿನಾಜೋದ್ದಿನ್ ಚಿಸ್ತಿ ಅವರ ನಿವಾಸಕ್ಕೆ ತಲುಪಿತು. ಅಲ್ಲಿ ಮೌಲ್ವಿಗಳಿಂದ ಗಂಧಕ್ಕೆ ವಿಶೇಷ ಪೂಜೆ ಸಲ್ಲಿಸಲಾಯಿತು.

ರಾತ್ರಿ 11:30ಕ್ಕೆ ಚಿಸ್ತಿ ಅವರ ಮನೆಯಿಂದ ಆರಂಭವಾದ ಗಂಧದ ಮೆರವಣಿಗೆ ತಳಗೇರಿ, ಭುವನೇಶ್ವರಿ ವೃತ್ತ, ಜನತಾ ವೃತ್ತ, ಕಿರಾಣಾ ಬಜಾರ್, ಕಪಡಾ ಬಜಾರ್ ಹಾಗೂ ಚಿತ್ತಾವಲಿ ವೃತ್ತದ ಮೂಲಕ ಸಂಚರಿಸಿ ಬೆಳಗ್ಗೆ 5 ಗಂಟೆಗೆ ಚಿತ್ತಾಷಹಾವಲಿ ದರ್ಗಾಕ್ಕೆ ತಲುಪಿತು. ಬಳಿಕ ದರ್ಗಾದ ಸಮಾಧಿಗೆ ಗಂಧದ ಲೇಪನ ಮಾಡಲಾಗಿದ್ದು, ಭಕ್ತರಿಗೆ ತಬರುಕ್ ವಿತರಿಸಲಾಯಿತು.

ಗಂಧದ ಮೆರವಣಿಗೆಯಲ್ಲಿ ಎರಡು ಒಂಟೆಗಳು, ಕುದುರೆ, ಯುವಕರ ಕಟ್ಟಿಗೆ ಆಟ ಹಾಗೂ ಭಕ್ತಿ ಪ್ರಧಾನ ಹಾಡುಗಳು ಜನಮನ ಸೆಳೆದವು.

ಎಡಿಷನಲ್ ಎಸ್‌ಪಿ ಮಹೇಶ್ ಮೇಘಣ್ಣನವರ್ ಹಾಗೂ ಡಿವೈಎಸ್‌ಪಿ ಶಂಕರಗೌಡ ಪಾಟೀಲ್ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಒದಗಿಸಲಾಗಿತ್ತು.

ಈ ವೇಳೆ ಸಿಪಿಐ ಎಸ್.ಸಿ ಪಾಟೀಲ್, ಪಿಎಸ್‌ಐಗಳಾದ ಮಂಜುನಾಥ ರೆಡ್ಡಿ, ತಿರುಮಲೇಶ, ರೇಣುಕಾ, ಸಿದ್ದಲಿಂಗ, ಮುಖಂಡರಾದ ಭೀಮಣ್ಣ ಸಾಲಿ, ರಾಜಶೇಖರ ಬಳ್ಳಾ, ನಾಗರೆಡ್ಡಿ ಗೋಪಸೇನ್, ಸುರೇಶ ಅಳ್ಳೊಳ್ಳಿ, ಮಲ್ಲರೆಡ್ಡಿ ಗೋಪಸೇನ್, ಮುತುವಲ್ಲಿ ಸೈಯದ್ ಮಿನಾಜೋದ್ದಿನ್ ಚಿಸ್ತಿ, ಸೈಯದ್ ಸೇಠ್, ನಿಜಾಮೋದಿನ್ ಚಿಸ್ತಿ, ಮಹ್ಮದ ಇಬ್ರಾಹಿಂ, ಚಂದ್ರಶೇಖರ ಬಳ್ಳಾ ಸೇರಿದಂತೆ ಸಾವಿರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಇದ್ದರು.

ಗುಲ್ಬರ್ಗಾ ವಿವಿ ಕುಲಪತಿಗೆ ಆ್ಯಸಿಡ್ ದಾಳಿ ಬೆದರಿಕೆ : ಪ್ರಕರಣ ದಾಖಲು


ಕಲಬುರಗಿ,ಮೇ.11-

ಗುಲ್ಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶಶಿಕಾಂತ್ ಎಸ್. ಉಡಿಕೇರಿ ಅವರಿಗೆ ಅನಾಮಧೇಯ ವ್ಯಕ್ತಿಗಳಿಂದ ಆ್ಯಸಿಡ್ ದಾಳಿಯ ಬೆದರಿಕೆ ಪತ್ರ ಬಂದಿದ್ದು, ಈ ಕುರಿತು ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

2024ರಲ್ಲಿ ನಡೆದ ಬಿ.ಇಡ್ ಪರೀಕ್ಷೆಯ ಮೌಲ್ಯಮಾಪನದಲ್ಲಿ ಭಾರೀ ಅಕ್ರಮ ನಡೆದಿರುವುದನ್ನು ಕುಲಪತಿಗಳು ಪತ್ತೆ ಹಚ್ಚಿದ್ದರು. ಈ ಸಂಬಂಧ ವಿಶ್ವವಿದ್ಯಾಲಯದ ಆಂತರಿಕ ಸಮಿತಿಯು ಅಂಕಗಳ ತಿದ್ದುಪಡಿ ನಡೆದಿರುವ ಕುರಿತು ವರದಿ ಸಲ್ಲಿಸಿತ್ತು. ಬಳಿಕ ಕುಲಪತಿಗಳು ವಿಷಯವನ್ನು ರಾಜ್ಯ ಸರ್ಕಾರ ಹಾಗೂ ರಾಜ್ಯಪಾಲರ ಗಮನಕ್ಕೆ ತಂದಿದ್ದರು.

ಈ ಗಂಭೀರ ದೂರಿನ ಹಿನ್ನೆಲೆಯಲ್ಲಿ ರಾಜ್ಯಪಾಲರು ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಿದ್ದರು. ಸಮಿತಿಯ ಆದೇಶದಂತೆ ಪ್ರಸ್ತುತ ಬಿ.ಇಡ್ ಮರು ಮೌಲ್ಯಮಾಪನ ಪ್ರಕ್ರಿಯೆ ನಡೆಯುತ್ತಿದೆ.

ಇದರಿಂದ ಆಕ್ರೋಶಗೊಂ



ಡಿರುವ ಅನಾಮಧೇಯ ವ್ಯಕ್ತಿಗಳು ಕುಲಪತಿಗಳಿಗೆ ಬೆದರಿಕೆ ಪತ್ರ ಬರೆದು, ''ಸತ್ಯಶೋಧನಾ ಸಮಿತಿಯ ತೀರ್ಮಾನ ಮತ್ತು ಮರು ಮೌಲ್ಯಮಾಪನ ನಮಗೆ ಒಪ್ಪುವುದಿಲ್ಲ. ₹2 ಲಕ್ಷ ನೀಡಿ ಬಿ.ಇಡ್ ಪ್ರವೇಶ ಪಡೆದಿದ್ದೇವೆ. ಕಳೆದ ಎರಡು ವರ್ಷಗಳಿಂದ ಫಲಿತಾಂಶಕ್ಕಾಗಿ ಕಾಯುತ್ತಿದ್ದೇವೆ. ಮರು ಮೌಲ್ಯಮಾಪನದಲ್ಲಿ ಅಂಕಗಳು ಕಡಿಮೆಯಾದರೆ ಅಥವಾ ಅನುತ್ತೀರ್ಣರಾದರೆ ನಿಮ್ಮ ಮುಖಕ್ಕೆ ಆ್ಯಸಿಡ್ ಹಾಕಿ ನರಳಿ ಬದುಕುವಂತೆ ಮಾಡುತ್ತೇವೆ'' ಎಂದು ಜೀವ ಬೆದರಿಕೆ ಹಾಕಿದ್ದಾರೆ ಎನ್ನಲಾಗಿದೆ.

ಬೆದರಿಕೆ ಪತ್ರದಿಂದ ಆತಂಕಗೊಂಡ ಕುಲಪತಿ ಪ್ರೊ. ಶಶಿಕಾಂತ್ ಎಸ್. ಉಡಿಕೇರಿ ನ್ಯಾಯಾಲಯದ ಮೊರೆ ಹೋಗಿದ್ದರು.

ತಮಿಳುನಾಡಿನ ಸಮಿಶ್ರ ಸರ್ಕಾರದ ಸಾಧನೆಗೆ ಕಾಂಗ್ರೆಸ್ ಎಸ್‌ಸಿ ಘಟಕದಿಂದ ವಿಜಯೋತ್ಸವ



ಹೊಸಪೇಟೆ/ ವಿಜಯನಗರ,ಮೇ.11-

ತಮಿಳುನಾಡಿನ ಸಮಿಶ್ರ ಸರ್ಕಾರದ ಸಾಧನೆ ಹಾಗೂ ರಾಜಕೀಯ ಬೆಳವಣಿಗೆಗಳನ್ನು ಸ್ವಾಗತಿಸಿ ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದಲ್ಲಿರುವ ಡಾ. ಪುನೀತ್ ರಾಜಕುಮಾರ್ ವೃತ್ತದಲ್ಲಿ ಕಾಂಗ್ರೆಸ್ ಪಕ್ಷದ ಪರಿಶಿಷ್ಟ ಜಾತಿ ಘಟಕದ ವತಿಯಿಂದ ವಿಜಯೋತ್ಸವ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಾಚರಣೆ ನಡೆಸಿದರು. ಸಾರ್ವಜನಿಕರು ಹಾಗೂ ಪಕ್ಷದ ಅಭಿಮಾನಿಗಳಿಗೆ ಸಿಹಿ ಹಂಚಿ ಸಂತಸ ವ್ಯಕ್ತಪಡಿಸಿದರು. ದೇಶದ ಪ್ರಜಾಪ್ರಭುತ್ವ ಮತ್ತು ಸಮಿಶ್ರ ರಾಜಕಾರಣದ ಯಶಸ್ಸಿನ ಪರವಾಗಿ ಕಾರ್ಯಕರ್ತರು ಜೈಕಾರ ಹಾಕಿದರು.

ಈ ವೇಳೆ ಮಾತನಾಡಿದ ವಿಜಯನಗರ ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಜಿಲ್ಲಾಧ್ಯಕ್ಷ ಸೋಮಶೇಖರ್ ಬಣ್ಣದಮನೆ ಅವರು, ದಕ್ಷಿಣ ಭಾರತದಲ್ಲಿ ಮನುವಾದಿ ಸಿದ್ಧಾಂತ ಹೊಂದಿರುವ ಬಿಜೆಪಿ ಪಕ್ಷಕ್ಕೆ ಅಧಿಕಾರ ಸಿಗದಿರುವುದಕ್ಕೆ ಅವರ ಕೋಮು ಭಾವನೆ ಹಾಗೂ ಸಂವಿಧಾನ ವಿರೋಧಿ ಮನಸ್ಥಿತಿಯೇ ಪ್ರಮುಖ ಕಾರಣ. ಸಮ ಸಮಾಜದ ಪರಿಕಲ್ಪನೆಯನ್ನು ಬೆಂಬಲಿಸುವ ಜನರು ಸದಾ ಸಾಮಾಜಿಕ ನ್ಯಾಯದ ಪರ ನಿಲ್ಲುತ್ತಾರೆ ಎಂದು ಹೇಳಿದರು.

ತಮಿಳುನಾಡಿನ ಮಾದರಿ ಆಡಳಿತ ಹಾಗೂ ಸಮಿಶ್ರ ಸರ್ಕಾರದ ಯಶಸ್ಸು ದೇಶಕ್ಕೆ ದಿಕ್ಕು ತೋರಿಸುವಂತಿದ್ದು, ಸಾಮಾಜಿಕ ನ್ಯಾಯದ ಹಾದಿಯಲ್ಲಿ ಸಾಗುತ್ತಿರುವ ಈ ಗೆಲುವನ್ನು ಸಂಭ್ರಮಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮುಖಂಡರು ತಿಳಿಸಿದರು.

ಕಾರ್ಯಕ್ರಮದಲ್ಲಿ ತಾಳೂರು ವೀರಭದ್ರ, ಸಜ್ಜಾತ್ ಖಾನ್, ರಘು, ನಾಗರಾಜ್, ಗಿರೀಶ್, ಪ್ರಕಾಶ್, ಬಿ. ಮೌಲಾಲಿ, ಶಶಿಕುಮಾರ್, ಕಿಶೋರ್ ಕುಮಾರ್, ಕಾರ್ತಿಕ್, ಗಣೇಶ್, ಯೋಹಾನ್, ಅಮೀದ್ ಹುಸೇನ್, ಬಾಬಾ ಫಕ್ರುದ್ದೀನ್, ಆಶಾ ಬೇಗಮ್ ಸೇರಿದಂತೆ ಅನೇಕ ಕಾಂಗ್ರೆಸ್ ಕಾರ್ಯಕರ್ತರು, ನಗರಸಭೆ ಸದಸ್ಯರು ಹಾಗೂ ವಿವಿಧ ಘಟಕಗಳ ಪದಾಧಿಕಾರಿಗಳು ಭಾಗವಹಿಸಿದ್ದರು.

ಒಂದನೇಯ ಪುಟದಿಂದ

ಆಶಾ ಕಾರ್ಯಕರ್ತೆಯರ ಬಾಕಿ ವೇತನ ಬಿಡುಗಡೆ ಆಗ್ರಹಿಸಿ ಪ್ರತಿಭಟನೆ

ಪ್ರೋತ್ಸಾಹಧನ ಹಾಗೂ ರಾಜ್ಯ ಸರ್ಕಾರದ ಗೌರವಧನ ಒಟ್ಟಿಗೆ ಸೇರಿಸಿ ಕನಿಷ್ಠ ಮಾಸಿಕ ರೂ.10,ಸಾವಿರ ಗೌರವಧನ ನೀಡಲು ಸೂಕ್ತಕ್ರಮ ಕೈಗೊಳ್ಳಬೇಕು.

2025 ಮಾರ್ಚ್ ಬಜೆಟ್‌ನಲ್ಲಿ ರಾಜ್ಯ ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರಿಗೆ ಹೆಚ್ಚಳ ಮಾಡಿರುವಂತೆ ಎಲ್ಲಾ ಆಶಾ ಕಾರ್ಯಕರ್ತೆಯರಿಗೂ ರೂ.1,000 ಹೆಚ್ಚಳ ಮಾಡುವುದಾಗಿ ಭರವಸೆ ನೀಡಿದಂತೆ ಹೆಚ್ಚಳ ಮಾಡಬೇಕು.ಟಿಬಿ ಚಟುವಟಿಕೆಗಳಿಗೆ ಪ್ರೋತ್ಸಾಹಧನ ಬರದಿರುವುದರಿಂದ, ಇದಕ್ಕೆ ಅನುದಾನವನ್ನು ನಿಷ್ಕ್ರಿಯಗೊಳಿಸಿರುವುದರಿಂದ ಇದಕ್ಕೆ ಪ್ರೇರೇಪಿಸುವ ಕಾರ್ಯ ಅಗತ್ಯವಿಲ್ಲವೆಂದು ಪರಿಗಣಿಸಿದಂತಿದೆ. ಸೂಕ್ತ ಆದೇಶ ಬರುವವರೆಗೂ ಈ ಚಟುವಟಿಕೆಯನ್ನು ಎಸಿಎಫ್ ಸರ್ವೇ, ಕಫ ನೀಡವುದು ಸ್ಥಗಿತಗೊಳಿಸಲಾಗುವುದು.

ಈ ಸಂದರ್ಭದಲ್ಲಿ ಜಾಣೆಕಾಲ್ ಅಂಗನವಾಡಿ ಕಾರ್ಯಕರ್ತರು ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಮಾನ್ವಿ ತಹಸೀಲ್ ಕಚೇರಿಯಲ್ಲಿ ಮಹಾಸಾಧ್ವಿ ಹೇಮರೆಡ್ಡಿ ಮಲ್ಲಮ್ಮ 604ನೇ ಜಯಂತಿ ಆಚರಣೆ

ಚಂದಾ ಮಾತನಾಡಿ ಹೇಮರಡ್ಡಿ ಮಲ್ಲಮ್ಮರ ಬದುಕು ಬೃಹತ್ ವಚನ ಸಂಪುಟ ಇದ್ದ ಹಾಗೆ ಮಲ್ಲಮ್ಮಳು ಮಹಾನ್ ಶಿವಭಕ್ತಿಯಾಗಿದ್ದರು. ಅವರು ಬದುಕಿದಂತಹ ಜೀವನ ಮಹಿಳೆಯರಿಗೆ ಪ್ರೇರಣೆಯಾಗಿದೆ ಎಂದು ತಿಳಿಸಿದರು.ಸನ್ಮಾನ : ಈ ವೇಳೆ ಬಿವಿಆರ್ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಪ್ರವೀಣಕುಮಾರ ರೆಡ್ಡಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರನ್ನು, ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಿದರು.

ಈ ಸಂದರ್ಭದಲ್ಲಿ ತಾಲೂಕ ವೈಧ್ಯಾಧಿಕಾರಿ ಡಾ.ಶರಣಬಸವ ಪಾಟೀಲ್ ಮುಷ್ಟೂರು, ಶಿರಸ್ತೆದಾರ ವಿರುಪಣ್ಣ, ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಶರಣಪ್ಪಗೌಡ ನಕ್ಕುಂದಿ, ಸಿದ್ದಲಿಂಗಪ್ಪ ವಕೀಲ ಚಿಕ್ಕಕೊಟ್ನೆಕಲ್, ಶ್ರೀಧರಸ್ವಾಮಿ ಕೊಟ್ನೆಕಲ್, ಜಗದೀಶ್ ಓತೂರು, ರೆಡ್ಡಿ ಸಮಾಜದ ಅಧ್ಯಕ್ಷ ಅಮರೇಗೌಡ ಪಾಟೀಲ್ ಉಮಳಿ ಹೊಸೂರು, ಹರಿಹರ ಪಾಟೀಲ್, ಎಸ್ .ಶರಣಪ್ಪಗೌಡ, ಗುರುಸಿದ್ದಪ್ಪ ಕಣ್ಣೂರು, ವಿರೇಶನಾಯಕ ಬೆಟ್ಟದೂರು, ಶರಣಗೌಡ ಮದ್ಲಾಪುರು, ಚಂದ್ರಪ್ಪಗೌಡ ಚೀಕಲಪರ್ವಿ, ಜಿ.ಮಂಜುನಾಥಗೌಡ, ಅಮರೇಶ ಚಿಂಚಲ್, ಶಿವಲಿಂಗಯ್ಯಸ್ವಾಮಿ, ಮಂಜುನಾಥ ಪಾಟೀಲ್ ನೀರಮಾನ್ವಿ, ಚಂದ್ರಮೌಳೇಶ್ವರ ಬೆಟ್ಟದೂರು, ಬಿ.ಪ್ರಭಾಕರಗೌಡ, ವಿಜಯ ಮಹಾಂತೇಶಸ್ವಾಮಿ ಸಂಕೇಶ್ವರ, ಅಮರೇಶ ಗವಿಗಟ್, ವಿಜಯಕುಮಾರ, ಶಂಕರಗೌಡ, ಚಂದ್ರುನಾಯಕ, ಚಂದ್ರಶೇಖರ ಶಿವಪೂಜಿ, ರಾಜಶೇಖರ್ ಕಪಗಲ್, ಹೊಯ್ಸಳಸ್ವಾಮಿ ಸೇರಿದಂತೆ ಇನ್ನಿತರರಿದ್ದರು.

ರೈತರಿಂದ ಬಿಳಿಜೋಳ ಖರೀದಿಸುವ ಪ್ರಕ್ರಿಯೆ ಪ್ರಾರಂಭ: ಉಪ ನಿರ್ದೇಶಕರಾದ ನಜೀರ್ ಅಹ್ಮದ್

ಈಗಾಗಲೇ ಜಿಲ್ಲೆಯಲ್ಲಿ ನೋಂದಣಿಯಾಗಿರುವ ಸರ್ವೆ ನಂ ಹಾಗೂ ಎಫ್‌ಐಡಿಗಳನ್ನು ಬೆಳೆದರ್ಶಕ ಆಪ್ ಮುಖಾಂತರ ನೈಜ್ಯತೆಯನ್ನು ಪರಿಶೀಲಿಸಲಾಗುವುದು. ಸಂಶಾಯತ್ಮಾಕ ಹಾಗೂ ಬಿಳಿ ಜೋಳವನ್ನು ಬೆಳೆಯದೇ ಇರುವ ಸರ್ವೆ ನಂ. ವಾರು ಎಫ್‌ಐಡಿಗಳನ್ನು ಬ್ಲಾಕ್ ಮಾಡಲು ಕ್ರಮವಹಿಸಲಾಗಿದೆ. ಇದಕ್ಕೆ ಆಕ್ಷೇಪಣೆಗಳೇನಾದರು ಇದ್ದಲ್ಲಿ ಸಮರ್ಥನೀಯ ದಾಖಲೆಗಳೊಂದಿಗೆ ಆಯಾ ತಾಲ್ಲೂಕಿನ ತಹಶೀಲ್ದಾರರ ಕಚೇರಿಗೆ ಸಂಪರ್ಕಿಸಬಹುದಾಗಿದೆ. ಮತ್ತು ಬಿಳಿ ಜೋಳವನ್ನು ಬೆಳೆಯದೇ ನೋಂದಣಿ ಮಾಡಿಕೊಂಡು ಖರೀದಿ ಕೇಂದ್ರಗಳಿಗೆ ಜೋಳವನ್ನು ಸರಬರಾಜು ಮಾಡಿರುವುದು ಕಂಡುಬದಲ್ಲಿ ಅಂತವರ ವಿರುದ್ಧ ಕಾನೂನತ್ಮಾಕ ಕ್ರಮವನ್ನು ಕೈಗೊಳ್ಳುವುದಲ್ಲದೇ ಈ ಖರೀದಿಯ ಹಣವನ್ನು ತಡೆ ಹಿಡಿಯಲಾಗುವುದು ಎಂದು ಜಿಲ್ಲಾ ಟಾಸ್ಕ್‌ಪೋರ್ಸ್ ಸಮಿತಿ ಸದಸ್ಯ ಕಾರ್ಯದರ್ಶಿಗಳು ಆಗಿರುವ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಉಪ ನಿರ್ದೇಶಕರಾದ ನಜೀರ್ ಅಹ್ಮದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಬೆನ್ನಿಗೆ ಚೂರಿ ಹಾಕುವ ಪಕ್ಷ’: ಕಾಂಗ್ರೆಸ್ ವಿರುದ್ಧ ಮೋದಿ ತೀವ್ರ ವಾಗ್ದಾಳಿ

ಬೆಂಗಳೂರು: ಕರ್ನಾಟಕದಲ್ಲಿ ಕಳೆದ ಮೂರು ವರ್ಷದಿಂದ ಕಾಂಗ್ರೆಸ್ ಸರ್ಕಾರ ಆಡಳಿತ ನಡೆಸುವ ಬದಲು ಆಂತರಿಕ ಸಂಘರ್ಷ ಪರಿಹರಿಸುವುದರಲ್ಲೇ ನಿರತವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮೂದಲಿಸಿದರು.

ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿ ರಾಜ್ಯಗಳಲ್ಲಿ ಜಯಭೇರಿ ಬಾರಿಸಿದ ಬಳಿಕ ಕರ್ನಾಟಕಕ್ಕೆ ಆಗಮಿಸಿರುವ ಪ್ರಧಾನಿ ಮೋದಿಗೆ ಇಂದು ಬೆಳಿಗ್ಗೆ ಹೆಚ್.ಎ.ಎಲ್ ವಿಮಾನ ನಿಲ್ದಾಣದಲ್ಲಿ ಅಭಿನಂದನಾ ಸ'ವ'ಾ'ರ'ಂ'ಭ' ಏರ್ಪಡಿಸಲಾಯಿತು.



ಅಭಿನಂದನೆ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಕರ್ನಾಟಕದಲ್ಲಿ ಸಿಎಂ ಎಷ್ಟು ದಿನ ಇರಲಿದ್ದಾರೆ ಅನ್ನೋದೇ ನಿರ್ಧರಿಸಲು ಆಗುತ್ತಿಲ್ಲ. ಇನ್ನೊಬ್ಬರಿಗೆ ಅವಕಾಶ ಸಿಗುತ್ತಾ ಇಲ್ಲವೋ ಅನ್ನೋದನ್ನು ನಿರ್ಣಯಿಸಲು ಆಗುತ್ತಿಲ್ಲ. ಆ ವಿಚಾರವನ್ನು ಡೋಲಾಯಮಾನವಾಗಿ ಇರಿಸಿದ್ದಾರೆ. ಕಾಂಗ್ರೆಸ್‌ನವರು ಸುಳ್ಳುಗಾರರು. ಅವರ ಗ್ಯಾರಂಟಿಯೂ ಸುಳ್ಳಾಗಿದೆ. ಕಾಂಗ್ರೆಸ್ ಪುಸ್ತಕದಲ್ಲಿ ಆಡಳಿತದ ಚಾಪ್ಟರ್ ಇಲ್ಲವೇ ಇಲ್ಲ ಎಂದು ಟೀಕಿಸಿದರು.

ನಾವು ಮೂರು ದಿನಗಳ ಹಿಂದೆ ಆಪರೇಷನ್ ಸಿಂಧೂರದ ಮೊದಲ ವರ್ಷಾಚರಣೆ ಮಾಡಿದ್ದೇವೆ. ನಾಳೆ ಬೆಳಗ್ಗೆ ಗುಜರಾತ್‌ನ ಸೋಮನಾಥ್ ದೇವಾಲಯದ 50 ವರ್ಷದ ಉತ್ಸವ ಮಾಡಲಾಗುತ್ತದೆ. ಆತ್ಮನಿರ್ಭರ್ ಭಾರತ, ವಿಕಸಿತ ಭಾರತಕ್ಕೆ ಈ ಐತಿಹಾಸಿಕ ಕ್ಷಣಗಳು ನಮಗೆ ಹೊಸ ಉತ್ತೇಜನ ನೀಡಲಿವೆ. ನಾನು ಮಾತೆ ಅಣ್ಣಮ್ಮಗೆ ನಮನ ಸಲ್ಲಿಸುತ್ತೇನೆ. ನಾಡಪ್ರಭು ಕೆಂಪೇಗೌಡರಿಗೂ ನಮನ ಸಲ್ಲಿಸುತ್ತೇನೆ. ಈಗ ದೇಶದಲ್ಲಿ ಚುನಾವಣಾ ಪರಿಣಾಮಗಳ ಮೇಲೆ ಚರ್ಚೆ ನಡೆಯುತ್ತಿದೆ. ಪುದುಚೇರಿಯಲ್ಲಿ ಸತತ ಎರಡನೇ ಬಾರಿ ಎನ್‌ಡಿಎ ಸರ್ಕಾರ, ಅಸ್ಸಾಂನಲ್ಲಿ ಸತತ ಮೂರನೇ ಬಾರಿ ಎನ್‌ಡಿಎ ಸರ್ಕಾರ ರಚನೆ ಆಗುವುದು, ಪ.ಬಂಗಾಳದಲ್ಲಿ ಮೊದಲ ಬಾರಿಗೆ ಜನ ದೊಡ್ಡ ಜನಾಶೀರ್ವಾದ ನೀಡಿ ಸರ್ಕಾರ ರಚನೆ ಮಾಡಿದ್ದೇವೆ ಎಂದು ತಿಳಿಸಿದರು.

ಇದೆಲ್ಲವೂ ಹೊಸ ಇತಿಹಾಸ ಸೃಷ್ಟಿಸುವ ಘಟನೆಗಳಾಗಿವೆ. ಭಾರತದ ರಾಷ್ಟ್ರನೀತಿ ಈ ದಿಶೆಗೆ ಮಹತ್ವಪೂರ್ಣವಾಗಿದೆ. ಯುವ ಜನರು, ರೈತರು, ಬಡವರು, ಮಧ್ಯಮ ವರ್ಗ, ಮಹಿಳೆಯರ ಮೂಡನ್ನು ತೋರಿಸುತ್ತದೆ. ಇದರ ಬಹುದೊಡ್ಡ ಸಂದೇಶ ಏನೆಂದರೆ ಅಸ್ಥಿರತೆಯಲಿರುವ ಜಗತ್ತಿನಲ್ಲಿ ಭಾರತದ ಜನ ಸ್ಥಿರತೆಯ ಮಂತ್ರ ಪಠಿಸುತ್ತಿದ್ದಾರೆ. ಭಾರತದ ಜನ ನಮಗೆ ಸ್ಪೀಡ್ ಬೇಕಾಗಿದೆ. ನಮಗೆ ಹಗರಣ ಅಲ್ಲ, ಪರಿಹಾರ ಬೇಕು. ನಮಗೆ ರಾಷ್ಟ್ರ ನೀತಿಯ ರಾಜನೀತಿ ಬೇಕು. ಇಂದು ಪೂರ್ತಿ ದೇಶ ಬಿಜೆಪಿಯ ರಾಷ್ಟ್ರ ನೀತಿ ಮೂಲಕ ಹೆಜ್ಜೆ ಹಾಕುತ್ತಿದೆ. ಕರ್ನಾಟಕ ಯಾವತ್ತೂ ಬಿಜೆಪಿಗೆ ಪ್ರೇರಣೆಯ ಕೇಂದ್ರ ಬಿಂದುವಾಗಿದೆ. ಬಿಜೆಪಿಯ ದೊಡ್ಡ ಪಕ್ಷ ಇಲ್ಲದಿದ್ದಾಗೂ ಕರ್ನಾಟಕ ಬಿಜೆಪಿಗೆ ಒಂದು ದೊಡ್ಡ ಶಕ್ತಿ ನೀಡಿತ್ತು ಎಂದರು.

ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಕರ್ನಾಟಕದಲ್ಲಿ ಮೊದಲ ಸ್ಥಾನದಲ್ಲಿದೆ. ತೆಲಂಗಾಣದಲ್ಲಿ ಎರಡನೇ ಸ್ಥಾನದಲ್ಲಿದೆ. 10 ವರ್ಷದ ಹಿಂದೆ ಬಂಗಾಳದಲ್ಲಿ ಬಿಜೆಪಿಯ ಮೂರು ಶಾಸಕರಿದ್ದರು. ಈಗ ಅಲ್ಲಿ 200ಕ್ಕೂ ಅಧಿಕ ಶಾಸಕರಿದ್ದಾರೆ. ಕೇರಳಂನಲ್ಲಿ ಬಿಜೆಪಿಯ 3 ಶಾಸಕರಿದ್ದೇವೆ. ಮೂರು ಬಂದ ಬಳಿಕ ಇನ್ನೂ ಕೇರಳಂನಲ್ಲೂ ಬಹುಮತ ಪಡೆಯುವ ದಿನ ದೂರವಿಲ್ಲ. ನಾವು 12 ವ'ಷ'ರ್'ಗ'ಳಿ'ಂ'ದ' ಕೇಂದ್ರದಲ್ಲಿದ್ದೇವೆ. 22 ರಾಜ್ಯಗಳಲ್ಲಿ ಬಿಜೆಪಿ, ಎನ್‌ಡಿಎ ಸರ್ಕಾರ ಇದೆ. ನಾವು ರಾಜ್ಯದ ವಿಕಾಸದಿಂದ ದೇಶದ ವಿಕಾಸದ ಧ್ಯೇಯದಿಂದ ಆಡಳಿತ ನಡೆಸುತ್ತಿದ್ದೇವೆ ಎಂದು ತಿಳಿಸಿದರು.

ಕಾಂಗ್ರೆಸ್ ಬೆನ್ನಿಗೆ ಚೂರಿ ಹಾಕುವ ಪಕ್ಷ: ಕಾಂಗ್ರೆಸ್‌ಗೆ ಮೂರು ಚುನಾವಣೆಯಲ್ಲಿ ಎಲ್ಲವೂ ಸೇರಿದರೂ 100 ಸೀಟ್ ಮುಟ್ಟಲು ಆಗಿಲ್ಲ. ಆದರೆ, ಅವರ ಅಹಂಕಾರ ಎಷ್ಟಿದೆ ಎಂದರೆ ಅವರ ಸೋಲಿಗೆ ಇಡೀ ಜಗತ್ತನ್ನು ದೂರುತ್ತಿದ್ದಾರೆ. ಸಂವಿಧಾನ, ಲೋಕತಂತ್ರ, ಕೋರ್ಟ್, ಚುನಾವಣಾ ಆಯೋಗ ವಿರುದ್ಧದ ಅವರ ದ್ವೇಷವನ್ನು ನಾನು ನನ್ನ ಸಾರ್ವಜನಿಕ ಜೀವನದಲ್ಲಿ ನೋಡಿಲ್ಲ. ಅವರು ನಿರಾಶೆಯಲ್ಲಿ ಮುಳುಗಿದ್ದಾರೆ, ಕೆಟ್ಟ ಭಾಷೆ ಬಳಸುವ ಬದಲು ಅವರ ಬಳಿ ಯಾವುದೇ ಅಜೆಂಡಾ ಇಲ್ಲದಾಗಿದೆ ಎಂದು ಆರೋಪಿಸಿದರು.

ನಮಗೆ ಲೋಕ ಕಲ್ಯಾಣ ಸರ್ವಪರಿಯಾಗಿದೆ. ಅದು ಬರೇ ಬಾಯಿ ಮಾತಿಗೆ ಸೀಮಿತವಾಗಿಲ್ಲ. ಅದನ್ನು ನಾವು ಬದುಕಿ ತೋರಿಸಿದ್ದೇವೆ. ನಮ್ಮ ಮಂತ್ರ ಸಬ್ ಕಾ ಸಾತ್ ಸಬ್ ಕಾ ವಿಕಾಸ್ ಇದೆ. ಉತ್ತಮ ಆಡಳಿತ ನಮ್ಮ ಮಾಡೆಲ್ ಆಗಿದೆ. ಹಾಗಾಗಿ, ಪ್ರತಿ ರಾಜ್ಯಗಳಲ್ಲಿ ಎರಡು, ಮೂರು ಬಾರಿ ಬಿಜೆಪಿಯನ್ನು ಗೆಲ್ಲಿಸುತ್ತಾರೆ. ಆದರೆ ಕಾಂಗ್ರೆಸ್ ಸರ್ಕಾರ ಒಂದು ಅವಧಿಯ ಬಳಿಕ ಎರಡು ಬಾರಿ ಗೆಲ್ಲಲು ಸಾಧ್ಯವಾಗುವುದಿಲ್ಲ. ಅವರ ವಿರುದ್ಧ ಬಹುಬೇಗ ಆಡಳಿತ ವಿರೋಧಿ ಅಲೆ ಕಾಣಿಸುತ್ತದೆ. ಕಾಂಗ್ರೆಸ್‌ಗೆ ಕೇವಲ ವಿಶ್ವಾಸಘಾತಕ ಮಾಡಲು ಬರುತ್ತದೆ ಎಂದು ಟೀಕಿಸಿದರು.

ಅಷ್ಟೇ ಅಲ್ಲ, ತಮಿಳುನಾಡಿನಲ್ಲಿ ಪ್ರಕ್ರಿಯೆ ನಡೆಯುತ್ತಿತ್ತು. ದಿಲ್ಲಿಯಲ್ಲಿ ಕೂತ ಇವರ ಕಾಂಗ್ರೆಸ್ ಇಕೋ ಸಿಸ್ಟಂ ಗೊಂದಲ ಮೂಡಿಸುವುದರಲ್ಲೇ ಇದ್ದಾರೆ. ಚುನಾವಣಾ ಫಲಿತಾಂಶ ಬಂತು. ಮೇ 5 ಆಯಿತು, 6 ಆಯಿತು,

ಎಂಟು ಆಯ್ತು ನೋಡಿ ತಮಿಳುನಾಡಿನಲ್ಲಿ ಸರ್ಕಾರ ರಚನೆ ಆಗುತ್ತಿಲ್ಲ ಅಂತಾ ಇದ್ದರು. ಅರೇ

ಬಳ್ಳಾರಿಯ ವೃತ್ತಗಳ ಅಪಘಾತ ವೃತ್ತಾಂತ

ಬಳ್ಳಾರಿ, ಮೇ.11-

ಸಿಗ್ನಲ್‌ಗಳು ಇಲ್ಲದೇ ಇರುವುದು, ವಾಹನಗಳ ಅಡ್ಡಾದಿಡ್ಡಿ ಸಂಚಾರ, ಒಂದು ದಿಕ್ಕಿನಿಂದ ಬರುವ ವಾಹನ ಇನ್ನೊಂದು ದಿಕ್ಕಿನವರಿಗೆ ಕಾಣದೇ ಇರುವುದು, ದಾದ ರಸ್ತೆಗಳು, ಶಿಸ್ತಿಲ್ಲದ ಪಾರ್ಕಿಂಗ್ ಸೇರಿದಂತೆ ಹಲವು ಕಾರಣಗಳಿಂದಾಗಿ ಈ ಜಾಗಗಳು ಅಪಾಯಕಾರಿಯಾಗಿ ಪರಿಣಮಿಸಿವೆ.

ಬಳ್ಳಾರಿಯ ಹೃದಯ ಭಾಗ ಎನಿಸಿಕೊಂಡಿರುವ ಗವಿಯಪ್ಪ (ಮೋತಿ) ವೃತ್ತ, ಗಡಿಗಿ ಚೆನ್ನಪ್ಪ (ರಾಯಲ್) ವೃತ್ತ, ಕೌಲ್ ಬಜಾರ್ ವೃತ್ತಗಳಲ್ಲಿ ವಾಹನ ಚಾಲನೆ ಎಂಬುದು ಸವಾಲಾಗಿ ಪರಿಣಮಿಸಿದೆ. ಮತ್ತೊಂದು ಕಡೆ ಪಾದಚಾರಿಗಳಿಗೂ ತೊಂದರೆ ಎದುರಾಗಿದೆ.

ಮೋತಿ ವೃತ್ತ ಸಿಗ್ನಲ್ ರಹಿತ ಜಂಕ್ಷನ್ ಆಗಿದ್ದು ಬೆಂಗಳೂರು ರಸ್ತೆ, ರೈಲ್ವೆ ಬ್ರಿಡ್ಜ್, ಜಿಲ್ಲಾಧಿಕಾರಿ ಕಚೇರಿ ರಸ್ತೆಗಳು ಈ ಜಾಗದಲ್ಲಿ ಕೂಡುತ್ತವೆ. ಇಲ್ಲಿ ಮೈಯೆಲ್ಲ ಕಣ್ಣಾಗಿಸಿಕೊಂಡು ವಾಹನ ಚಲಾಯಿಸಬೇಕಾದ ಪರಿಸ್ಥಿತಿ ಇದೆ. ಪ್ರತಿನಿತ್ಯ ಸಣ್ಣಪುಟ್ಟ ಅಪಘಾತಗಳು ಇಲ್ಲಿ ಸಾಮಾನ್ಯ.




ಇದೇ ವೃತ್ತದಲ್ಲಿ ವರ್ಷದ ಹಿಂದೆ ಕೆಕೆಆರ್‌ಟಿಸಿ ಬಸ್‌ವೊಂದು ರಸ್ತೆ ದಾಟುತ್ತಿದ್ದ ವ್ಯಕ್ತಿಯ ಮೇಲೆ ಹರಿದಿತ್ತು. ವ್ಯಕ್ತಿ ಗುರುತೂ ಪತ್ತೆಯಾಗದಂತೆ ಸ್ಥಳದಲ್ಲೇ ಸಾವಿಗೀಡಾಗಿದ್ದ. ಇತ್ತೀಚೆಗೆ ಹಣ್ಣಿನ ಅಂಗಡಿಗೆ ಬಸ್ ನುಗ್ಗಿತ್ತು. ಹೀಗಾಗಿ ಇಲ್ಲಿ ಪೊಲೀಸರ ನಿಯೋಜನೆ ಅಥವಾ ಸಿಗ್ನಲ್ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಇದೆ. ಆದರೆ, ಇಲ್ಲಿ ಸಿಗ್ನಲ್ ಅಳವಡಿಸಿದರೆ ರೈಲ್ವೆ ಬ್ರಿಡ್ಜ್‌ನಲ್ಲಿ ಟ್ರಾಫಿಕ್ ಸಮಸ್ಯೆ ಉಂಟಾಗುವ ಅಪಾಯವಿದೆ.

ಇನ್ನು ಮೊಹಮದೀಯ ಶಾಲೆ ಬಳಿಯ ವೃತ್ತದ್ದೂ ಇದೇ ಕತೆ. ಹೊಸಪೇಟೆ ರಸ್ತೆ ಪಕ್ಕದ ಸೇತುವೆಯಿಂದ ಬರುವ ವಾಹನಗಳು, ಕೌಲ್ ಬಜಾರ್ ರಸ್ತೆ, ರೇಡಿಯೊ ಪಾರ್ಕ್ ರಸ್ತೆಗಳು ಕೂಡುವ ಈ ವೃತ್ತದಲ್ಲಿಯೂ ಸಿಗ್ನಲ್ ಇಲ್ಲ. ಪೊಲೀಸರ ನಿರ್ವಹಣೆ ಇಲ್ಲ.

ಇನ್ನು ರಾಯಲ್ ಸರ್ಕಲ್‌ನಲ್ಲಿ ಪರಿಸ್ಥಿತಿ ಹದಗೆಟ್ಟದ್ದು, ಯಾವ ವಾಹನ ಯಾವ ದಿಕ್ಕಿನಿಂದ ಬರುತ್ತದೆ ಎಂಬುದೇ ತಿಳಿಯುವುದಿಲ್ಲ. ವೃತ್ತದಲ್ಲಿ ಬೃಹತ್ ಗಡಿಯಾರ ಗೋಪುರವಿದ್ದು, ರಸ್ತೆಗಳನ್ನೇ ಮರೆ ಮಾಡುತ್ತದೆ. ಈ ವೃತ್ತವನ್ನು ಸುತ್ತು ಹಾಕಿ ಮತ್ತೊಂದು ರಸ್ತೆಗೆ ಸೇರಿಕೊಳ್ಳಬೇಕಿದ್ದರೆ ಹರಸಾಹಸಪಡಬೇಕು. ಈ ವೃತ್ತ ಪಾದಚಾರಿಗಳಿಗೂ ಅಪಾಯಕಾರಿಯಾಗಿ ಪರಿಣಮಿಸಿದೆ. ಕೆಲ ದಿನಗಳ ಹಿಂದೆ ಈ ವೃತ್ತದಲ್ಲಿ ಡಾಂಬರು ಹಾಕಿ ರಸ್ತೆಯನ್ನು ಸಮತಟ್ಟು ಮಾಡಲಾಗಿದೆ. ಹೀಗಾಗಿ ವಾಹನಗಳು ಸರಾಗವಾಗಿ ಸಾಗುತ್ತವೆ. ಆದರೆ, ಅಪಾಯ ಮಾತ್ರ ತಪ್ಪಿಲ್ಲ ಇಂದಿರಾ (ಸಂಗಂ) ವೃತದಲ್ಲಿ ಸಿಗ್ನಲ್ ಇದೆ. ಹೀಗಾಗಿ ಇಲ್ಲಿ ಅಂಥ ಸಮಸ್ಯೆ ಇಲ್ಲ. ಆದರೆ, ಸಿಗ್ನಲ್ ಇಲ್ಲದ ಸಂದರ್ಭಗಳಲ್ಲಿ ಇಲ್ಲಿಯೂ ಅದೇ ಸಮಸ್ಯೆ. ಇಲ್ಲಿಯಂತೆ ಎಲ್ಲ ವೃತ್ತಗಳಲ್ಲಿ ಸಿಗ್ನಲ್ ಅಳವಡಿಸಿದರೆ ಸಮಸ್ಯೆಗೆ ಬಗೆಹರಿಸಬಹುದು ಎಂದು ನಾಗರಿಕರು ಅಭಿಪ್ರಾಯಪಟ್ಟಿದ್ದಾರೆ.

ಪ್ರಮುಖ ಸರ್ಕಲ್‌ಗಳಲ್ಲಿ ಜೀಬ್ರಾ ಕ್ರಾಸ್‌ಗಳನ್ನು ಹಾಕಬೇಕು. ಜನರನ್ನು ಅಲ್ಲಿಯೇ ರಸ್ತೆ ದಾಟುವಂತೆ ಪೊಲೀಸರು ಸೂಚಿಸಬೇಕು. ಯಾವೆಲ್ಲ ರಸ್ತೆಗಳಲ್ಲಿ ಟ್ರಾಫಿಕ್ ಸಮಸ್ಯೆ ಇದೆಯೋ, ಎಲ್ಲೆಲ್ಲಿ ಏಕಮುಖ ಸಂಚಾರ ಇದೆಯೋ ಅಲ್ಲಿ ಪೊಲೀಸರ ನಿಯೋಜನೆ ಇರಬೇಕು ಎಂಬ ಅಭಿಪ್ರಾಯವೂ ಕೇಳಿಬಂದಿದೆ.

ದೇಶಕ್ಕೆ ಕಾರ್ಮಿಕರ ಕೊಡುಗೆ ಅನನ್ಯ



ಬಳ್ಳಾರಿ,ಮೇ.11-

ಪಟ್ಟಣದ 4ನೇ ವಾರ್ಡ್ ಅಂಬೇಡ್ಕರ್ ಭವನದಲ್ಲಿ ತಾಲ್ಲೂಕು ಪೇಂಟರ್ಸ್ ಕಾರ್ಮಿಕರ ಸಂಘ, ಕರ್ನಾಟಕ ಕಟ್ಟಡ ಕಾರ್ಮಿಕರ ಸಂಘಟನೆ ಹಾಗೂ ಕರ್ನಾಟಕ ಶ್ರಮಿಕ ಶಕ್ತಿಗಳ ಸಹಯೋಗದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ವಿಶ್ವ ಕಾರ್ಮಿಕರ ದಿನಾಚರಣೆಯಲ್ಲಿ ಮಾತನಾಡಿದರು. ಪ್ರಸ್ತುತ ದಿನಗಳಲ್ಲಿ ಕಾರ್ಮಿಕರ ಕಾನೂನುಗಳನ್ನು ಹತ್ತಿಕ್ಕಲಾಗುತ್ತಿದೆ. ಉದ್ದಿಮೆದಾರರ ಪರವಾಗಿ ಸರ್ಕಾರಗಳು ನಿಂತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ತಾಲ್ಲೂಕು ಪೇಂಟರ್ಸ್ ಕಾರ್ಮಿಕರ ಸಂಘದ ಗೌರವ ಅಧ್ಯಕ್ಷ ಮಾನಪ್ಪ ಪೇಂಟರ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ತಾಲ್ಲೂಕಿನಲ್ಲಿ ಪೇಂಟರ್ಸ್ ಕುಟುಂಬಗಳಿಗೆ ನಿವೇಶನ, ವಸತಿ ಸೌಲಭ್ಯ, ಸಮುದಾಯ ಭವನ ಸೇರಿ ವಿವಿಧ ಸೌಕರ್ಯ ಕಲ್ಪಿಸುವಂತೆ ಸರ್ಕಾರಕ್ಕೆ ಒತ್ತಾಯಿಸಿದರು.

ಕಟ್ಟಡ ಕಾರ್ಮಿಕರ ಸಂಘಟನೆಯ ಜಿಲ್ಲಾ ಗೌರವ ಅಧ್ಯಕ್ಷ ಕರಿಯಪ್ಪ ಗುಡಿಮನಿ, ಜಿಲ್ಲಾ ಅಧ್ಯಕ್ಷ ನೀಲಪ್ಪ ಪೇಂಟರ್, ಜಿಲ್ಲಾ ಉಪಾಧ್ಯಕ್ಷ ಬಸವರಾಜ, ಕರ್ನಾಟಕ ಶ್ರಮಿಕ ಶಕ್ತಿಯ ರಾಜ್ಯ ಕಾರ್ಯದರ್ಶಿಗಳಾದ ಚನ್ನಮ್ಮ, ಚನ್ನಮಲ್ಲಮ್ಮ, ತಾಲ್ಲೂಕು ಪೇಂಟರ್ಸ್ ಕಾರ್ಮಿಕರ ಸಂಘದ ಅಧ್ಯಕ್ಷ ಮಾರುತಿ ಪೇಂಟರ್, ಪದಾಧಿಕಾರಿ ರಾಮಕೃಷ್ಣ ಚಿತ್ರಗಾರ, ಹಮಾಲರ ಸಂಘದ ತಾಲ್ಲೂಕು ಅಧ್ಯಕ್ಷ ಮೊಹಿದ್ದೀನ್, ಸಿಐಟಿಯು ತಾಲ್ಲೂಕು ಪ್ರಧಾನ ಕಾರ್ಯದರ್ಶಿ ನಾಗರಾಜ, ಮುಖಂಡ ಈ. ಧನಂಜಯ ಇದ್ದರು.



ಮಹಾರಾಣಾ ಪ್ರತಾಪ್ ಸ್ವಾಭಿಮಾನಿ: ಸಿದ್ದು ಕೊಣ್ಣೂರ

ಬಳ್ಳಾರಿ,ಮೇ.11-

ಪಟ್ಟಣದ ಬೆಳಗಲಿ ರಸ್ತೆಯ ಮಹಾಲಿಂಗೇಶ್ವರ ಮಹಾದ್ವಾರದ ಬಳಿ ಹಿಂದೂ ರಜಪೂತ ಕ್ಷತ್ರಿಯ ತೇಲಿ ಸಮಾಜದಿಂದ ಶನಿವಾರ ಹಮ್ಮಿಕೊಂಡ ಮಹಾರಾಣಾ ಪ್ರತಾಪ ಸಿಂಗರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಮೊಘಲ್ ಸಾಮ್ರಾಜ್ಯದ ವಿರುದ್ಧ ತಲೆಬಾಗದೆ ಗುಡುಗಿದ ಧೀರ. ಅಕ್ಬರನ ಬೃಹತ್ ಸೇನೆಯನ್ನು ಎದುರಿಸಿ 'ಹಳದಿಘಾಟ' ಕದನದಲ್ಲಿ ಅವರು ತೋರಿದ ಪರಾಕ್ರಮ ಇಂದಿಗೂ ಇತಿಹಾಸದ ರೋಮಾಂಚನಕಾರಿ ಅಧ್ಯಾಯವಾಗಿದೆ. ಕೇವಲ ರಾಜ್ಯಕ್ಕಾಗಿ ಮಾತ್ರವಲ್ಲದೆ, ತನ್ನ ನೆಲದ ಸಂಸ್ಕೃತಿ ಮತ್ತು ಸ್ವಾತಂತ್ರ್ಯಕ್ಕಾಗಿ ಅರಮನೆಯ ಸುಖವನ್ನು ತ್ಯಜಿಸಿ ಅರಣ್ಯವಾಸ ಅನುಭವಿಸಿದ ಅವರ ತ್ಯಾಗ ಅನನ್ಯವಾದುದು ಎಂದರು.

ಸಿದ್ದುಗೌಡ ಪಾಟೀಲ, ಚಂದ್ರಶೇಖರ ಮೋರೆ, ಚಂದ್ರು ಗೊಂದಿ ಮಾತನಾಡಿದರು. ಸಂಘದ ಅಧ್ಯಕ್ಷ ಮಾನಿಕಲಾಲ ಬೆಳಗಾಂವಕರ ಅಧ್ಯಕ್ಷತೆ ವಹಿಸಿದ್ದರು. ಮಹಾಲಿಂಗ ಕಂಕಣವಾಡಿ, ಸಿ.ಎಂ.ಕಟಗಿ, ಸುರೇಶ ಗೋಲಬಾವಿ,ಇದ್ದರು.

ಅದ್ದೂರಿ ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನ ಮಹಾಲಿಂಗೇಶ್ವರ ದೇವಸ್ಥಾನದಿಂದ ನಡುಚೌಕಿ, ಡಬಲ್ ರಸ್ತೆ ಮಾರ್ಗವಾಗಿ ಕಾರ್ಯಕ್ರಮದ ವೇದಿಕೆವರೆಗೆ ಮಹಾರಾಣಾ ಪ್ರತಾಪರ ಚಿತ್ರದ ಅದ್ದೂರಿ ಮೆರವಣಿಗೆ ನಡೆಯಿತು. ಮಹಾಲಿಂಗೇಶ್ವರ ಸ್ವಾಮೀಜಿ ಮೆರವಣಿಗೆಗೆ ಚಾಲನೆ ನೀಡಿದರು.

ಮಲ್ಲಮ್ಮರ ವ್ಯಕ್ತಿತ್ವ ಮಹಿಳೆಯರಿಗೆ ಆದರ್ಶ



ಕಲಬುರಗಿ,ಮೇ.11-

ಇಲ್ಲಿನ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಭಾನುವಾರ ನಡೆದ ಹೇಮರಡ್ಡಿ ಮಲ್ಲಮ್ಮನವರ ಜಯಂತ್ಯುತ್ಸವದಲ್ಲಿ ಮಾತನಾಡಿದರು. ಪಟ್ಟಣದ ರಸ್ತೆ, ವೃತ್ತಗಳಿಗೆ ಮಲ್ಲಮ್ಮನವರ ಹೆಸರು ನಾಮಕರಣ ಮಾಡುವಂತೆ ಹೇಮ ವೇಮರಡ್ಡಿ ಜನ ಸಂಘದ ಪದಾಧಿಕಾರಿಗಳು ಪುರಸಭೆ ಅಧಿಕಾರಿಗಳಿಗೆ ಒತ್ತಾಯಿಸಿದರು.

ಶಿರಸ್ತೇದಾರ ಜಿ.ಪಂಪಾಪತಿ, ರಾಜಶೇಖರರೆಡ್ಡಿ, ವೈದ್ಯ ಕೆ. ಶ್ರೀನಿವಾಸರೆಡ್ಡಿ, ಪವನಕುಮಾರ್ ರೆಡ್ಡಿ, ಕಾಮರೆಡ್ಡಿ ಲಕ್ಷ್ಮಣರೆಡ್ಡಿ, ಡಿ. ಜಡೇಶರೆಡ್ಡಿ, ಟಿ. ಸುರೇಶರೆಡ್ಡಿ, ವೆಂಕಟರೆಡ್ಡಿ, ರಮೇಶರೆಡ್ಡಿ, ಮಾಧವರೆಡ್ಡಿ, ಸಂದೀಪ್‌ರೆಡ್ಡಿ, ಹರೀಶ್‌ರೆಡ್ಡಿ, ತಿಪ್ಪಾರೆಡ್ಡಿ, ಎನ್. ಜಗದೀಶ್ ಮೆಟ್ರಿ ಇದ್ದರು.

ಔರಾದ್‌ನಲ್ಲಿ ವಿಶ್ವ ಅಮ್ಮಂದಿರ ದಿನಾಚರಣೆ: ಉಡಿ ತುಂಬಿ ಗೌರವ

ಬೀದರ್,ಮೇ.11-

ಅಂಗನವಾಡಿ ಕಾರ್ಯಕರ್ತರು, ವಿವಿಧ ಸೇವಾ ವಲಯದ ಮಹಿಳೆಯರಿಗೆ ಉಡಿ ತುಂಬಿ ಗೌರವಿಸಲಾಯಿತು.

ಮುಖ್ಯ ಶಿಕ್ಷಕಿ ಸವಿತಾ ಪಾಟೀಲ ಮಾತನಾಡಿ, ಗೆಳೆಯರ ಬಳಗದ ಮಾತೃ ಪ್ರೇಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಮಹಿಳೆಯರನ್ನು ಗೌರವಿಸುವ ಇಂತಹ ಕಾರ್ಯ ಮಾದರಿಯಾಗಿದೆ ಎಂದು ಹೇಳಿದರು.

ಶಿಕ್ಷಕಿ ಸಿರಾಜ್ ಬೇಗಂ ಮಾತನಾಡಿ, ಹೆಣ್ಣು ಮಕ್ಕಳಿಗೆ ಎಲ್ಲಿ ಗೌರವ ಸಿಗುತ್ತದೆಯೋ, ಅಲ್ಲಿ ಅಭಿವೃದ್ಧಿ ಸಾಧ್ಯವಾಗುತ್ತದೆ. ಹೆಣ್ಣು ಕುಟುಂಬ ಮತ್ತು ಮಕ್ಕಳಿಗಾಗಿ ಸದಾ ತ್ಯಾಗ ಮಾಡುತ್ತಾಳೆ ಎಂದು ಹೇಳಿದರು. ನಸೀಮಾ ಬೇಗಂ ಅಧ್ಯಕ್ಷತೆ ವಹಿಸಿದ್ದರು. ಶ್ರೀದೇವಿ ಮಲ್ಲಪ್ಪ ಗೌಡ, ಇರ್ಫಾನಾ ಬೇಗಂ, ರಜೀಯಾ ಬೇಗಂ, ಸಂಪೂರ್ಣಾ ಫುಲೆ, ಲಕ್ಷ್ಮೀಬಾಯಿ ಫುಲೆ, ಪತ್ರಕರ್ತ ಮಲ್ಲಪ್ಪ ಗೌಡ, ಸಿದ್ದಾರೆಡ್ಡಿ ಬಿರಾದಾರ, ಕಲೀಂ ಉಲ್ಲಾ,



ರಹೀಮ್ ಶೇಕ್, ಶಫಿವುಲ್ಲಾ, ಓಂಕಾರ ಮೇತ್ರೆ ಹಾಗೂ ಬಬ್ಲು ಖಾನ್ ಉಪಸ್ಥಿತರಿದ್ದರು. ಪಿಡಿಒ ಚಂದ್ರಕಾಂತ ಫುಲೆ ಸ್ವಾಗತಿಸಿದರು. ಬಸವ ಚಿಕ್ಕಲಿಂಗೆ ನಿರೂಪಿಸಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಿ ಸನ್ಮಾನಿಸಲಾಯಿತು.

ಆತಂಕದಲ್ಲಿ !; ಇಂದು ಡೆಲ್ಲಿ ಗೆದ್ದರೆ ಬೆಂಗಳೂರು ಸೇಫ್, ಸೋತರೆ ಟೂರ್ನಿಯಿಂದ ಔಟ್!!

ಬೆಂಗಳೂರು

ಐಪಿಎಲ್ 2026ರ ನಿರ್ಣಾಯಕ ಪಂದ್ಯದಲ್ಲಿ, ಪಂಜಾಬ್ ಕಿಂಗ್ಸ್ ಸೋಮವಾರ ಧರ್ಮಶಾಲಾದ ಕ್ರೀಡಾಂಗಣದಲ್ಲಿ ದೆಹಲಿ ಕ್ಯಾಪಿಟಲ್ಸ್ ಅನ್ನು ಎದುರಿಸಲಿದೆ. ಪ್ಲೇಆಫ್ ರೇಸ್‌ನಲ್ಲಿ ಉಳಿಯಲು ಪಂಜಾಬ್‌ಗೆ ಈ ಪಂದ್ಯ ನಿರ್ಣಾಯಕವಾಗಿದೆ. ಸತತ ಮೂರು ಸೋಲುಗಳ ನಂತರ ಒತ್ತಡದಲ್ಲಿರುವ ಪಂಜಾಬ್, ಈಗ ತವರಿನಲ್ಲಿ ಮತ್ತೆ ಪುಟಿದೇಳಲು ಎದುರು ನೋಡುತ್ತಿದೆ. ಪಂಜಾಬ್ ತನ್ನ ಕೊನೆಯ ಮೂರು ಪಂದ್ಯಗಳನ್ನು ಧರ್ಮಶಾಲಾದಲ್ಲೇ ಆಡಲಿದೆ.

ಈ ಋತುವಿನ ಐಪಿಎಲ್‌ನಲ್ಲಿ ಅದ್ಭುತ ಆರಂಭ ಪಡೆದುಕೊಂಡಿದ್ದ ಪಂಜಾಬ್ ಕಿಂಗ್ಸ್ ಅಜೇಯ ತಂಡವಾಗಿ ಮುನ್ನುಗ್ಗಿತ್ತು, ಆದರೆ ಇದೀಗ ಸತತ ಸೋಲು ತಂಡಕ್ಕೆ ತಲೆನೋವಾಗಿ ಪರಿಣಮಿಸಿದೆ. ಹಿಂದಿನ ಪಂದ್ಯದಲ್ಲಿ ತಂಡದ ಫೀಲ್ಡಿಂಗ್ ಕಳಪೆಯಾಗಿತ್ತು, ಹಲವು ಕ್ಯಾಚ್‌ಗಳನ್ನು ಕೈ ಚೆಲ್ಲಿತ್ತು. ಇದಲ್ಲದೇ, ಅರ್ಶ್‌ದೀಪ್ ಸಿಂಗ್ ನೇತೃತ್ವದ ವೇಗದ ಬೌಲಿಂಗ್ ದಾಳಿಯು ಬಹಳಷ್ಟು ರನ್‌ಗಳನ್ನು ಬಿಟ್ಟುಕೊಟ್ಟಿತ್ತು. ಬ್ಯಾಟಿಂಗ್‌ನಲ್ಲಿ, ಪ್ರಿಯಾಂಶ್ ಆರ್ಯ ಮತ್ತು ಪ್ರಭ್ಸಿಮ್ರಾನ್ ಸಿಂಗ್ ಅವರ ಆರಂಭಿಕ ಜೋಡಿ ಉತ್ತಮ ಆರಂಭದ ಹೊರತಾಗಿಯೂ ತಂಡ ಸ್ಥಿರತೆ ಕಾಯ್ದುಕೊಳ್ಳುವಲ್ಲಿ ವಿಫಲವಾಗಿದೆ.

ಏತನ್ಮಧ್ಯೆ ದೆಹಲಿ ತಂಡವು ತವರಿನಲ್ಲಿ ಸತತ ಎರಡು ಸೋಲುಗಳನ್ನು ಅನುಭವಿಸಿದೆ. ನಿಧಾನಗತಿಯ ಮತ್ತು ಟರ್ನ್ ಪಿಚ್‌ಗಳಲ್ಲಿ ಬ್ಯಾಟ್ಸ್‌ಮನ್‌ಗಳು ಹೆಣಗಾಡುತ್ತಿದ್ದಾರೆ. ಬೌಲಿಂಗ್‌ನಲ್ಲಿ ಸ್ಪಿನ್ನರ್ ಕುಲದೀಪ್ ಯಾದವ್ ತಮ್ಮ ಪ್ರಭಾವ ಬೀರಲು ಸಾಧ್ಯವಾಗುತ್ತಿಲ್ಲ. ಸದ್ಯ ಪಂಜಾಬ್ 10 ಪಂದ್ಯಗಳಲ್ಲಿ 6 ಗೆಲುವು ಸಾಧಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದರೂ, 11 ಪಂದ್ಯಗಳಲ್ಲಿ 7ರಲ್ಲಿ ಸೋತಿರುವ ದೆಹಲಿಗೆ ಇದು ಮಾಡು-ಇಲ್ಲ-ಮಡಿ ಪಂದ್ಯವಾಗಿದೆ.

ಮುಖಾಮುಖಿ ದಾಖಲೆ: ಎರಡೂ ತಂಡಗಳು ಇಲ್ಲಿಯವರೆಗೆ 36 ಪಂದ್ಯಗಳಲ್ಲಿ ಮುಖಾಮುಖಿಯಾಗಿವೆ. ಪಂಜಾಬ್ ಕಿಂಗ್ಸ್ 18 ಪಂದ್ಯಗಳಲ್ಲಿ ಗೆದ್ದಿದ್ದರೆ, ಡೆಲ್ಲಿ ಕ್ಯಾಪಿಟಲ್ಸ್ 17 ಪಂದ್ಯಗಳಲ್ಲಿ ಗೆಲುವು ಸಾಧಿಸಿದೆ, ಒಂದು ಪಂದ್ಯ ಡ್ರಾದಲ್ಲಿ ಕೊನೆಗೊಂಡಿದೆ. ಕಳೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಡೆಲ್ಲಿ ಕ್ಯಾಪಿಟಲ್ಸ್ ತಂಡವನ್ನು ಆರು ವಿಕೆಟ್‌ಗಳಿಂದ ಸೋಲಿಸಿತು. ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂಜಾಬ್ ಕಿಂಗ್ಸ್ ತನ್ನ ವೇಗವನ್ನು ಕಾಯ್ದುಕೊಳ್ಳುತ್ತದೆಯೇ ಅಥವಾ ಡೆಲ್ಲಿ ಕ್ಯಾಪಿಟಲ್ಸ್ ಮೇಲುಗೈ ಸಾಧಿಸುತ್ತದೆಯೇ ಎಂಬುದು ಕುತೂಹಲಕಾರಿಯಾಗಿದೆ.

ಮಳೆಯ ಆತಂಕ: ಮೇ 11 ರಿಂದ 15 ರವರೆಗೆ ಹಿಮಾಚಲ ಪ್ರದೇಶದಲ್ಲಿ ಮಳೆಯಾಗುವ ಮುನ್ಸೂಚನೆ ಇದೆ. ಹವಾಮಾನ ಇಲಾಖೆಯ ಪ್ರಕಾರ, ಮೇ 11 ರಂದು ರಾಜ್ಯದಲ್ಲಿ ಮಳೆಯಾಗುವ ಸಾಧ್ಯತೆಯಿದೆ. ಇದು ಪಂದ್ಯಕ್ಕೆ ಅಡ್ಡಿ ಪಡಿಸುವ ಸಾಧ್ಯತೆ ಇದೆ. ಧರ್ಮಶಾಲಾ ಪಿಚ್: ಮೈದಾನದಲ್ಲಿರುವ ಪಿಚ್ ಆರಂಭದಲ್ಲಿ ವೇಗದ ಬೌಲರ್‌ಗಳಿಗೆ ಅನುಕೂಲಕರವಾಗಿರುತ್ತದೆ. ಆದ್ದರಿಂದ, ಪಂಜಾಬ್ ಕಿಂಗ್ಸ್‌ನ ವೇಗದ ಬೌಲರ್ ಅರ್ಶ್‌ದೀಪ್ ಸಿಂಗ್ ಗಮನ ಸೆಳೆಯುತ್ತಾರೆ. ಔಟ್‌ಫೀಲ್ಡ್ ವೇಗವಾಗಿರುತ್ತದೆ, ಆಗಾಗ್ಗೆ ಹೆಚ್ಚಿನ ಸ್ಕೋರ್‌ಗಳಿಗೂ ಕಾರಣವಾಗುತ್ತದೆ. ಒಟ್ಟಾರೆಯಾಗಿ, ಈ ಕ್ರೀಡಾಂಗಣವು ಫ್ಯಾನ್ಸ್‌ಗಳಿಗೆ ರಸದೌತಣ ನೀಡಲಿದೆ. ಧರ್ಮಶಾಲಾದಲ್ಲಿ ನಡೆದ ಉಭಯ ತಂಡಗಳ ನಡುವಿನ ಹಿಂದಿನ ನಾಲ್ಕು ಪಂದ್ಯಗಳು ಸಮಬಲದ ಪೈಪೋಟಿಯಿಂದ ಕೂಡಿದ್ದು, ಎರಡೂ ತಂಡಗಳು ತಲಾ ಎರಡು ಪಂದ್ಯಗಳನ್ನು ಗೆದ್ದಿವೆ. 2023 ರಿಂದ, ಧರ್ಮಶಾಲಾದಲ್ಲಿ ನಡೆದ ಐದು ಪಂದ್ಯಗಳಲ್ಲಿ ಮೊದಲು ಬ್ಯಾಟ್ ಮಾಡಿದ ತಂಡವು ನಾಲ್ಕುಬಾರಿ ಗೆಲುವು ಸಾಧಿಸಿವೆ. ಇಲ್ಲಿಯ ಸರಾಸರಿ ಮೊದಲ ಇನ್ನಿಂಗ್ಸ್ ಸ್ಕೋರ್ 209 ಆಗಿದೆ. ಆದ್ದರಿಂದ, ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡುವ ಯಾವುದೇ ತಂಡವು 200 ಕ್ಕಿಂತ ಹೆಚ್ಚು ರನ್ ಗಳಿಸಲು ಬಯಸುತ್ತದೆ.

ನಿಮ್ಮೂರು ಸುದ್ದಿ

ಸಂಪಾದಕೀಯ

ಕುಡಿತ ಬೇಡ ಎನ್ನುತ್ತಲೇ ಮದ್ಯ ಮಾರಾಟಕ್ಕೆ ಟಾರ್ಗೆಟ್: ಜನರಲ್ಲಿ ವ್ಯಸನ ಬೆಳೆಸುತ್ತಿದೆಯೇ ವ್ಯವಸ್ಥೆ?



ಕಡಿಮೆ ಬೆಲೆಯ ಮದ್ಯ ಹೆಚ್ಚು ಮಾರಾಟವಾದಷ್ಟು ಸರ್ಕಾರದ ಆದಾಯ ಹೆಚ್ಚಬಹುದು, ಆದರೆ ಅಷ್ಟೇ ಪ್ರಮಾಣದಲ್ಲಿ ಆ ಕುಟುಂಬಗಳ ಆರ್ಥಿಕ ಸ್ಥಿತಿ ಕುಸಿಯುತ್ತದೆ. ಇದು ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುತ್ತದೆ.

ಎರಡು ವರ್ಷಗಳ ಹಿಂದೆ ರಾಜ್ಯ ಸರ್ಕಾರ ಜನರ ಹಿತಾಸಕ್ತಿಗೆ ಅಪಾಯ ಉಂಟು ಮಾಡುವ ಕ್ರಮಕ್ಕೆ ಮುಂದಾಗಿತ್ತು. ಸಾವಿರಕ್ಕೂ ಅಧಿಕ ಹೊಸ ಮದ್ಯದ ಅಂಗಡಿ ಶುರು ಮಾಡಲು ನಿರ್ಧರಿಸಿತ್ತು. ಇದರ ಬಗ್ಗೆ ಸಾಕಷ್ಟು ವಿರೋಧ ವ್ಯಕ್ತವಾಗಿತ್ತು. ಗ್ಯಾರಂಟಿ ಯೋಜನೆ ಮೂಲಕ ಕುಟುಂಬದ ಮಹಿಳೆಯರಿಗೆ ಸರ್ಕಾರ ಹಣ ನೀಡುತ್ತಿದೆ. ಅದೇ ಸರ್ಕಾರ ಅದೇ ಕುಟುಂಬದ ಗಂಡಸರಿಗೆ ಕುಡಿಸುತ್ತಿದೆ. ಒಂದು ಕೈಯಲ್ಲಿ ಕೊಟ್ಟು ಇನ್ನೊಂದು ಕೈಯಲ್ಲಿ ಕಿತ್ತುಕೊಳ್ಳುತ್ತಿದೆ ಎಂದು ಹೋರಾಟಗಾರರು ವಾದಿಸಿದ್ದರು.

ರಾಜ್ಯದಲ್ಲಿ 1992ರಲ್ಲಿ ಮದ್ಯದಂಗಡಿಗಳಿಗೆ ಪರವಾನಗಿ ನೀಡುವುದನ್ನು ನಿಲ್ಲಿಸಲಾಗಿತ್ತು. ಈ ಕಾರಣದಿಂದಾಗಿ ಹಲವು ಗ್ರಾಮಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ನಡೆಯುತ್ತಿದೆ. ಈ ಅಕ್ರಮ ಮದ್ಯ ಮಾರಾಟವನ್ನು ನಿಲ್ಲಿಸಬೇಕಾದರೆ ಗ್ರಾಮಗಳಲ್ಲಿ ನಾವು ಸಕ್ರಮವಾಗಿ ಮದ್ಯ ಮಾರಾಟಕ್ಕೆ ಅವಕಾಶ ನೀಡಬೇಕಾಗುತ್ತದೆ ಎಂಬುದು ಅಬಕಾರಿ ಸಚಿವರು ಆರ್.ಬಿ. ತಿಮ್ಮಾಪುರ ಅವರ ವಾದವಾಗಿದೆ. 1992ರಿಂದ ಈವರೆಗೆ ರಾಜ್ಯದಲ್ಲಿ ಜನಸಂಖ್ಯೆ, ಮದ್ಯ ಮಾರಾಟ ಕೂಡಾ ಹೆಚ್ಚಾಗಿದೆ. ಆದ್ದರಿಂದ ಪರವಾನಗಿ ಇರುವವರು ಬೇರೆ ಸ್ಥಳದಲ್ಲಿ ಮದ್ಯದಂಗಡಿ ತೆರೆದರೆ ಸಾಲದು ಹೊಸ ಮದ್ಯದಂಗಡಿಗಳ ಅಗತ್ಯವಿದೆ ಎಂಬ ವಾದವೂ ಇದೆ.

ಕುಡಿತ ಬೇಡ ಎಂದು ಹೇಳುವ ಸರ್ಕಾರ ಮದ್ಯ ಮಾರಾಟಕ್ಕೆ ಟಾರ್ಗೆಟ್ ನೀಡಿದೆ. ಇವೆಲ್ಲ ವಾದ-ವಿವಾದಗಳ ನಡುವೆ ನಾವು ರಾಜ್ಯದ ಮದ್ಯ ಮಾರಾಟದ ಇತಿಹಾಸದತ್ತ ಒಂದು ಇಣುಕು ನೋಟ ಬೀರುವುದು ಮುಖ್ಯ. ಯಾವುದೇ ಒಂದು ಸರಕಾದರೂ ಒಂದು ಕಾರ್ಖಾನೆಯಲ್ಲಿ ಉತ್ಪಾದನೆಯಾಗುತ್ತದೆ, ಅಲ್ಲಿಂದ ಡೀಲರ್‌ಗಳಿಗೆ ಹೋಗುತ್ತದೆ, ಬಳಿಕ ರಿಟೇಲ್ ಮಾರಾಟಗಾರರಿಗೆ ಹೋಗುತ್ತದೆ. ಆದರೆ ರಾಜ್ಯದಲ್ಲಿ ಮದ್ಯ ಸರಬರಾಜು ಆ ರೀತಿಯಲ್ಲಿ ನಡೆಯುತ್ತಿಲ್ಲ.

ರಾಜ್ಯದಲ್ಲಿ ಈ ಹಿಂದೆ ಹೆಂಡ, ಸಾರಾಯಿ, ಬಿಯರ್ ಮೊದಲಾದ ಮದ್ಯಗಳಿದ್ದವು. ಈ ಪೈಕಿ ಈಗಾಗಲೇ ಹೆಂಡ ನಿಷೇಧವಾಯಿತು. 2007ರ ಜುಲೈ 1ರಂದು ಸಾರಾಯಿ ನಿಷೇಧವಾಯಿತು. ಇದಕ್ಕೂ ಮುನ್ನವೇ 2003ರ ಮೇ 22ರಂದು ರಾಜ್ಯದಲ್ಲಿ ಕರ್ನಾಟಕ ರಾಜ್ಯ ಪಾನೀಯ ನಿಗಮ ನಿಯಮಿತ () ಆರಂಭವಾಯಿತು. ರಾಜ್ಯದಲ್ಲಿ ಮದ್ಯದ ಮಾರಾಟ, ವಿತರಣೆ ಮತ್ತು ಅಬಕಾರಿ ಸುಂಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಹಾಗೂ ದಕ್ಷತೆಯನ್ನು ತರುವುದು ಈ ನಿಗಮ ಆರಂಭದ ಉದ್ದೇಶ. ಈ ಹಿಂದೆ ಮೂಲಕವೇ ರಾಜ್ಯದ ಯಾವುದೇ ಫ್ಯಾಕ್ಟರಿಯಲ್ಲಿ ತಯಾರಿಸಲಾದ ಮದ್ಯ ಸಗಟು ಮಾರಾಟಗಾರರಿಗೆ ತಲುಪುತ್ತಿತ್ತು. ಆದರೆ ಈಗ ಹಾಗಿಲ್ಲ.

ರಾಜ್ಯ, ಹೊರ ರಾಜ್ಯ, ಹೊರ ದೇಶದ ಮದ್ಯದ ಮೊದಲು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿರುವ ಗೋದಾಮಿಗೆ ತಲುಪಬೇಕು. ಆ ಗೋದಾಮಿನಿಂದ ನೇರವಾಗಿ ಮದ್ಯ ಮಾರಾಟಗಾರರಿಗೆ ತಲುಪಿಸಲಾಗುತ್ತದೆ. ಇದರಿಂದಾಗಿ ಸರ್ಕಾರ ಆದಾಯವನ್ನು ಗಳಿಸುತ್ತಿದೆ. ಇದೀಗ ಇದೇ ಸರ್ಕಾರ ಹೊಸ ಮದ್ಯದಂಗಡಿ ತೆರೆಯಲು ಅವಕಾಶ ಮಾಡಿಕೊಟ್ಟಿದೆ. ಆದಾಯದ ಮೂಲವಾದ ಕಾರಣ ಆದಾಯ ಹೆಚ್ಚಳಕ್ಕೆ ಹೆಚ್ಚು ಗಮನ ಕೊಡುತ್ತಿದೆ. ಅಷ್ಟು ಮಾತ್ರವಲ್ಲದೆ ಯಾವುದೇ ಪಕ್ಷ ಆಗಿರಲಿ ಪ್ರತಿ ತಿಂಗಳು ಈ ಹಿಂದಿನ ತಿಂಗಳಿಗಿಂತ ಜನರಿಗೆ ಹೆಚ್ಚು ಕುಡಿಸಿ ಎಂಬ ಟಾರ್ಗೆಟ್‌ಗಳನ್ನು ನೀಡುತ್ತಿದೆ. ಈ ಟಾರ್ಗೆಟ್ ತಲುಪಲು ಅಬಕಾರಿ ಇಲಾಖೆ ಮತ್ತು ಮದ್ಯ ಮಾರಾಟಗಾರರು ಶ್ರಮಿಸುತ್ತಾರೆ. ಇದು ವಾಸ್ತವ.

ಮದ್ಯ ಮಾರಾಟದಿಂದ ಆದಾಯ ಹೆಚ್ಚಳ

2003-04ರಲ್ಲಿ ₹2,500 ₹3,000 ಕೋಟಿ ಸ್ಥಾಪನೆಯ ವರ್ಷ

2010-11 ₹8,345 ಕೋಟಿ ಸ್ಥಿರ ಬೆಳವಣಿಗೆಯ ಹಂತ

2015-16 ₹15,333 ಕೋಟಿ

2017-18 ₹17,948 ಕೋಟಿ

2018-19 ₹19,701 ಕೋಟಿ

2020-21 ₹23,332 ಕೋಟಿ ಕೋವಿಡ್ ಸಮಯದಲ್ಲಿ ಮಾರಾಟ ಏರಿಳಿತ

2021-22 ₹26,377 ಕೋಟಿ

2022-23 ₹29,920 ಕೋಟಿ 13.43% ಬೆಳವಣಿಗೆ ದಾಖಲು

2023-24 ₹34,500 ಕೋಟಿ (ಗುರಿ) ಅಬಕಾರಿ ತೆರಿಗೆ ಹೆಚ್ಚಳ

2024-25 ₹38,525 ಕೋಟಿ (ಗುರಿ) ಪ್ರಸಕ್ತ ಸಾಲಿನ ಅಂದಾಜು

ಈ ಆದಾಯ ಏರಿಕೆಯಾಗಿರುವುದು ಜನರು ಕುಡಿತ ಹೆಚ್ಚಿಸಿರುವುದರಿಂದಲೇ ಎಂಬ ವಾದ ಕೆಲವರದ್ದು. ಆದರೆ ವಾಸ್ತವ ಬೇರೆಯೇ ಇದೆ. ಪ್ರತಿ ವರ್ಷ ಮದ್ಯ ಮಾರಾಟ ಹೆಚ್ಚಿಸುವಂತೆ ಟಾರ್ಗೆಟ್ ನೀಡಿರುವುದೇ ಈ ಆದಾಯ ಹೆಚ್ಚಳಕ್ಕೆ ಕಾರಣ. ಪ್ರತಿ ಜಿಲ್ಲೆಗಳಿಗೂ ಅಬಕಾರಿ ಇಲಾಖೆಯು ಟಾರ್ಗೆಟ್ ನಿಗದಿ ಮಾಡಿರುತ್ತದೆ. ಈ ಟಾರ್ಗೆಟ್ ತಲುಪಲು ಸಾಧ್ಯವಾಗಿದ್ದರೆ, ಆ ಜಿಲ್ಲೆಯಲ್ಲಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ ಎಂಬ ನಿಟ್ಟಿನಲ್ಲಿ ಕ್ರಮಕ್ಕೆ ಇಲಾಖೆ ಮುಂದಾಗುತ್ತದೆ. ಆದ್ದರಿಂದ ಜಿಲ್ಲೆಯ ಅಧಿಕಾರಿಗಳು ಜಿಲ್ಲೆಯ ವ್ಯಾಪ್ತಿಯ ಎಲ್ಲ ಮದ್ಯದಂಗಡಿಗಳಿಗೆ ಟಾರ್ಗೆಟ್ ನಿಗದಿ ಮಾಡುತ್ತಾರೆ. ಅಕ್ರಮ ಮದ್ಯ ಮಾರಾಟದ ನೋಟಿಸ್‌ನಿಂದ ತಪ್ಪಿಸಿಕೊಳ್ಳುವ ನಿಟ್ಟಿನಲ್ಲಿ ಮದ್ಯದಂಗಡಿಗಳು ನೀಡಿದ ಟಾರ್ಗೆಟ್‌ನಷ್ಟೇ ಮದ್ಯವನ್ನು ಖರೀಸುತ್ತದೆ. ಆದರೆ ಅಷ್ಟೊಂದು ಮದ್ಯ ಮಾರಾಟ ಅಸಾಧ್ಯವಾದ ಕಾರಣ ಅಲ್ಲೊಂದು ಅಕ್ರಮ ನಡೆಸುತ್ತಾರೆ. ಕಿರಾಣಿ ಅಂಗಡಿಗಳಿಗೆ ಅಕ್ರಮವಾಗಿ ಮದ್ಯ ಮಾರಾಟ ನಡೆಸಲಾಗುತ್ತದೆ, ಅಲ್ಲಿಂದ ಅಕ್ರಮವಾಗಿ ಮದ್ಯಪ್ರಿಯರಿಗೆ ಮಾರಾಟವಾಗುತ್ತದೆ. ಇವೆಲ್ಲವೂ ಸಕ್ರಮ ಮದ್ಯ ಮಾರಾಟದ ನೆಪದಲ್ಲಿ ಸರ್ಕಾರದ ಶಾಮೀಲುದಾರಿಕೆಯಲ್ಲಿ ನಡೆಯುವ ಅಕ್ರಮ ಮದ್ಯ ಮಾರಾಟ! ಈ ಅಕ್ರಮದಲ್ಲಿ ಯಾವ ಪಕ್ಷವೂ ಹೊರತಾಗಿಲ್ಲ.

2009ರಲ್ಲಿ ಮೈಸೂರು ಸೇಲ್ಸ್ ಇಂಟರ್ನ್ಯಾಷನಲ್ ಲಿಮಿಟೆಡ್ () ಮದ್ಯ ಮಾರಾಟ ಮಳಿಗೆ ಆರಂಭವಾಗಿದೆ. ಅದರ ಮೂಲಕವೂ ಅಲ್ಲಲ್ಲಿ ಮದ್ಯ ಮಾರಾಟ ಮಳಿಗೆ ತೆರೆದು ಮದ್ಯ ಮಾರಾಟ ಮಾಡಲಾಗಿದೆ. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಹೀಗೆ ಯಾವುದೇ ಸರ್ಕಾರ ಬಂದರೂ ಮಾಡಿರುವುದೇ ಇದನ್ನೇ.

ರಾಜ್ಯದಲ್ಲಿ ಮದ್ಯದಂಗಡಿಗಳ ಸಂಖ್ಯೆಯಲ್ಲಿ ಹೆಚ್ಚಳ

ಮದ್ಯದಂಗಡಿಗಳ (ಅಬಕಾರಿ ಪರವಾನಗಿ) ಸಂಖ್ಯೆ 2016ರಿಂದೀಚೆಗೆ ಕ್ರಮೇಣ ಹೆಚ್ಚಾಗಿದೆ. ಲಭ್ಯವಿರುವ ಇತ್ತೀಚಿನ ವರದಿಗಳ ಪ್ರಕಾರ, 2024-25ರ ಅವಧಿಯಲ್ಲಿ ರಾಜ್ಯದಲ್ಲಿ ಮದ್ಯದ ಪರವಾನಗಿಗಳ ಸಂಖ್ಯೆ 14,000 ದಾಟಿದೆ. 2016ರ ಆಸುಪಾಸಿನಲ್ಲಿ ಮದ್ಯದಂಗಡಿಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳು, ಮತ್ತು ಎಂಎಸ್ಐಎಲ್ () ಮಳಿಗೆಗಳನ್ನು ಒಳಗೊಂಡಂತೆ ಒಟ್ಟು ಅಬಕಾರಿ ಪರವಾನಗಿಗಳ ಸಂಖ್ಯೆ ಸರಿಸುಮಾರು 10,000 ರಿಂದ 11,000ದ ಆಸುಪಾಸಿನಲ್ಲಿತ್ತು. ಆದರೆ 2025ರಲ್ಲಿ ಒಟ್ಟು 14,101 ಪರವಾನಗಿಗಳನ್ನು ನವೀಕರಿಸಲಾಗಿದೆ ಅಥವಾ ನೀಡಲಾಗಿದೆ. ಇದರಲ್ಲಿ ಹೆಚ್ಚಾಗಿ -2 (ಮದ್ಯ ಮಾರಾಟ ಮಳಿಗೆ) ಮತ್ತು -9 (ಬಾರ್ ಮತ್ತು ರೆಸ್ಟೋರೆಂಟ್) ಗಳು ಸೇರಿವೆ. ರಾಜ್ಯದಲ್ಲಿ 2009ರಲ್ಲಿ 463 ಇದ್ದ ಮದ್ಯದಂಗಡಿಗಳ ಸಂಖ್ಯೆ, 2023ರ ಹೊತ್ತಿಗೆ 1,029ಕ್ಕೆ ಏರಿಕೆಯಾಗಿದೆ.

2011-12ರಲ್ಲಿ ರಾಜ್ಯದ 350 ಹಳ್ಳಿಗಳಲ್ಲಿ ಅಧ್ಯಯನ ಮಾಡಲಾಗಿತ್ತು. ಈ ಅಧ್ಯಯನದಲ್ಲಿ ಹಳ್ಳಿಗಳಲ್ಲಿ ಜನರು ಪ್ರತಿದಿನ ಸಂಜೆ ಕುಡಿಯುವ ಚಟಕ್ಕೆ ಒಳಗಾಗಿರುವುದು ಬಹಿರಂಗವಾಗಿತ್ತು. ಇದಾದ ಬಳಿಕ ರಾಜ್ಯದಲ್ಲಿ ಮಹಿಳಾ ಸಂಘಟನೆಗಳು ಹೋರಾಟ ಶುರು ಮಾಡಿತು. ಇವೆಲ್ಲವುದರ ನಡುವೆ ಅಬಕಾರಿ ಇಲಾಖೆಗೆ ಹೊಸ ಹೊಸ ಟಾರ್ಗೆಟ್ ವಿಧಿಸಲಾಗುತ್ತಿದೆ. ಮತ್ತೆ ಅದೇ ಪ್ರಕ್ರಿಯೆ ಪುನಾರವರ್ತನೆಯಾಗುತ್ತಾ ಸಾಗುತ್ತದೆ.

ಪ್ರಜ್ಞಾಪೂರ್ವಕವಾಗಿ ಹೆಚ್ಚಿನ ಜನರಿಗೆ ಮದ್ಯವನ್ನು ಕುಡಿಸುವಂತಹ ಕೆಲಸವನ್ನು ಅಲ್ಲಲ್ಲಿ ಮದ್ಯದಂಗಡಿ ತೆರೆಯುವ ಮೂಲಕ, ಟಾರ್ಗೆಟ್ ಹೆಚ್ಚಿಸುವ ಮೂಲಕ ಮಾಡಲಾಗುತ್ತದೆ. ಇದನ್ನು ಸರ್ಕಾರ ನಿಲ್ಲಿಸಬೇಕು. ಈ ನಿಟ್ಟಿನಲ್ಲಿ ಸರ್ಕಾರ ಗ್ಯಾರಂಟಿ ನೀಡಬೇಕು. ಯಾವ ಗ್ಯಾರಂಟಿಗಳ ಮೂಲಕ ಮಹಿಳಾ ಸಬಲೀಕರಣದತ್ತ ಈ ಸರ್ಕಾರ ಹೆಜ್ಜೆ ಇಟ್ಟಿದೆಯೋ ಅದೇ ಸರ್ಕಾರ ಈ ಅಪಾಯಕಾರಿ ಬೆಳವಣಿಗೆಯಲ್ಲಿ ತೊಡಗಿರುವುದನ್ನು ನಿಲ್ಲಿಸಬೇಕು. ವಿಪಕ್ಷಗಳೂ ತಾವು ಅಧಿಕಾರವಿದ್ದಾಗ ಮಾಡಿದ್ದು ಇದನ್ನೇ ಎಂದು ಒಪ್ಪಿಕೊಂಡು ಪ್ರಾಮಾಣಿಕವಾಗಿ ಸರ್ಕಾರದ ಕ್ರಮವನ್ನು ಖಂಡಿಸಬೇಕು.

ಸರ್ಕಾರವು ''ಮದ್ಯಪಾನ ಆರೋಗ್ಯಕ್ಕೆ ಹಾನಿಕರ'' ಎಂಬ ಎಚ್ಚರಿಕೆಯನ್ನು ನೀಡುತ್ತಲೇ, ಮದ್ಯದ ಮಳಿಗೆಗಳ ಪರವಾನಗಿ ಹೆಚ್ಚಿಸುವುದು ಎಷ್ಟು ಸರಿ? ಅಷ್ಟಕ್ಕೂ ಬಡ ಮತ್ತು ಮಧ್ಯಮ ವರ್ಗದ ಜನರು ಈ ''ಟಾರ್ಗೆಟ್'' ಸಂಸ್ಕೃತಿಯ ನೇರ ಬಲಿಪಶುಗಳು. ಕಡಿಮೆ ಬೆಲೆಯ ಮದ್ಯ ಹೆಚ್ಚು ಮಾರಾಟವಾದಷ್ಟು ಸರ್ಕಾರದ ಆದಾಯ ಹೆಚ್ಚಬಹುದು, ಆದರೆ ಅಷ್ಟೇ ಪ್ರಮಾಣದಲ್ಲಿ ಆ ಕುಟುಂಬಗಳ ಆರ್ಥಿಕ ಸ್ಥಿತಿ ಕುಸಿಯುತ್ತದೆ. ಇದು ಸಮಾಜದ ಸ್ವಾಸ್ಥ್ಯವನ್ನು ಹದಗೆಡಿಸುತ್ತದೆ. ಆದಾಯಕ್ಕಾಗಿ ಮದ್ಯವನ್ನು ಅವಲಂಬಿಸುವ ಈ ''ದುಶ್ಚಟ'' ಸರ್ಕಾರಗಳಿಗೂ ಅಂಟಿಕೊಂಡಿದೆ ಎನ್ನುವುದು ಕಟು ಸತ್ಯ. ಪರ್ಯಾಯ ಆದಾಯದ ಮೂಲಗಳನ್ನು ಹುಡುಕದ ಹೊರತು ಈ ದ್ವಂದ್ವ ನಿಲ್ಲುವುದು ಕಷ್ಟ.

ಸಿನಿಮಾ ಟೂ ಮುಖ್ಯಮಂತ್ರಿ ; ವಿಜಯ್ ಬಗ್ಗೆ ನಿಮಗೆಷ್ಟು ಗೊತ್ತು?

ತಮಿಳುನಾಡು ರಾಜಕೀಯದಲ್ಲಿ ಹೊಸ ಇತಿಹಾಸ ಸೃಷ್ಟಿಯಾಗಿದೆ. ದಶಕಗಳ ಕಾಲ ಆಳಿದ್ದ ದ್ರಾವಿಡ ಪಕ್ಷಗಳ ಭದ್ರಕೋಟೆಯನ್ನು ಭೇದಿಸಿದ ಟಿವಿಕೆ () ಮುಖ್ಯಸ್ಥ ದಳಪತಿ ವಿಜಯ್ ತಮಿಳುನಾಡಿನ 24ನೇ ಮುಖ್ಯಮಂತ್ರಿಯಾಗಿ ಪದಗ್ರಹಣ ಮಾಡಿದ್ದಾರೆ. ವಿಜಯ್ ಅವರು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮುನ್ನ ನಡೆದ ನಾಟಕೀಯ ಬೆಳವಣಿಗೆಗಳು ಭಾರತೀಯ ಪ್ರಜಾಪ್ರಭುತ್ವದ ಇತಿಹಾಸದಲ್ಲಿ ಸ್ಮರಣೀಯ. ಚುನಾವಣೆಯಲ್ಲಿ ವಿಜಯ್ ನೇತೃತ್ವದ ಟಿವಿಕೆ 108 ಸೀಟ್‌ಗಳನ್ನ ಪಡೆದ ಸಿಂಗಲ್ ಲಾರ್ಜೆಸ್ಟ್ ಪಾರ್ಟಿ ಆಗಿ ಹೊರಹೊಮ್ಮಿದ್ದರೂ, ತಲೆ ಎಣಿಕೆ ರಾಜ್ಯಪಾಲರ ಮುಂದೆ ಅಲ್ಲ, ಸದನದಲ್ಲಿ ಎಂಬ ಸುಪ್ರೀಮ್ ಕೋರ್ಟ್ ತೀರ್ಪನ್ನೇ ಕಡೆಗಣಿಸಿ ವಿಜಯ್ ಅವರನ್ನು ಕಾಡಿಸಿ ಪೀಡಿಸಲಾಯಿತು. ಆ ಎಲ್ಲಾ ಅಡೆತಡೆಗಳನ್ನು ದಾಟಿ, ಕೊನೆಗೂ ರಾಜ್ಯಪಾಲರು ಆಹ್ವಾನ ನೀಡುವಂತೆ ಮಾಡಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ. ಪ್ರಮಾಣವಚನದ ನಂತರದ ಭಾಷಣದಲ್ಲಿ ಎಷ್ಟೋ ಅವಮಾನಗಳ ಕುರಿತು ವಿಜಯ್ ಪ್ರಸ್ತಾಪಿಸುತ್ತಾರೆ.

ಪ್ರಮಾಣ ವಚನದ ಬಳಿಕ ವೇದಿಕೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ವಿಜಯ್, ''ನನಗೆ ಹೇಗೆ ಪ್ರಾರಂಭಿಸಬೇಕೆಂದು ತಿಳಿದಿಲ್ಲ. ನಾನು ಒಬ್ಬ ಸಾಮಾನ್ಯ ಸಹಾಯಕ ನಿರ್ದೇಶಕನ ಮಗ, ಅವನು ಹೇಗೋ ಕಷ್ಟಪಟ್ಟು ಸಿನಿಮಾದಲ್ಲಿ ಯಶಸ್ವಿಯಾಗದರು. ಬಡತನ ಎಂದರೇನು ಎಂದು ನನಗೂ ತಿಳಿದಿದೆ'' ಎಂದಿದ್ದಾರೆ. ''ಈ ಪ್ರಯಾಣದಲ್ಲಿ ನನಗೆ ಅನೇಕ ಕಷ್ಟಗಳು ಎದುರಾದರೂ, ನನ್ನೊಂದಿಗೆ ಇದ್ದ ನೀವು ಸಹ ಅದೇ ಕಷ್ಟಗಳನ್ನು ಮತ್ತು ಅದೇ ಅವಮಾನಗಳನ್ನು ಎದುರಿಸಿದ್ದೀರಿ. ನೀವು ಅದನ್ನು ಗಂಭೀರವಾಗಿ ಪರಿಗಣಿಸಲಿಲ್ಲ ಮತ್ತು ನನ್ನೊಂದಿಗಿದ್ದೀರಿ. ನಿಮಗೆ ನಾನು ಮೋಸ ಮಾಡುವುದಿಲ್ಲ. ನಾನು ಸಾಧ್ಯವಾದದ್ದನ್ನು ಮಾತ್ರ ಮಾಡುತ್ತೇನೆ. ತಮಿಳುನಾಡಿಗೆ 10 ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಸಾಲವಿದೆ. ಅವರು ಎತ್ತಲಾಗದ ಹೊರೆಯನ್ನು ಬಿಟ್ಟು ಹೋಗಿದ್ದಾರೆ. ಅಂತಹ ಪರಿಸ್ಥಿತಿಯಲ್ಲಿ ನಾನು ಇದನ್ನು ಕೈಗೆತ್ತಿಕೊಂಡಿದ್ದೇನೆ. ಇದು ದೊಡ್ಡ ಜವಾಬ್ದಾರಿ'' ಎಂದಿದ್ದಾರೆ.

ತಮಿಳುನಾಡು ರಾಜಕೀಯದಲ್ಲಿ ಚಿತ್ರನಟರ ಪ್ರಭಾವ ಎಂಬುದು ದಶಕಗಳ ಇತಿಹಾಸ. ಆದರೆ ದಳಪತಿ ಎಂದೇ ಫೇಮಸ್ ಆಗಿರುವ ಜೋಸೆಫ್ ವಿಜಯ್ ಅವರ ಮುಖ್ಯಮಂತ್ರಿಯಾಗುವವರೆಗಿನ ಈ ಪಯಣ ಕೇವಲ ಅದೃಷ್ಟವಲ್ಲ; ಅದು ದಶಕಗಳ ಕಾಲದ ವ್ಯವಸ್ಥಿತ ಯೋಜನೆ ಮತ್ತು ಚಾಣಾಕ್ಷತನದ ಫಲ.

ಆರಂಭಿಕ ಹಿನ್ನಡೆ ಮತ್ತು ಟೀಕೆಗಳ ಎದುರು ಸ್ಥಿತಪ್ರಜ್ಞತೆ:-

ವಿಜಯ್ ಅವರ ರಾಜಕೀಯ ಅಡಿಪಾಯ ಹಾಕಿದ್ದು ಚಲನಚಿತ್ರಗಳ ಮೂಲಕ. 1984 ರಲ್ಲಿ, ವಿಜಯ್ ಕೇವಲ 10 ವರ್ಷದವನಿದ್ದಾಗ, ಅವರ ತಂದೆ ಅವರನ್ನು ಬಾಲ ಕಲಾವಿದರನ್ನಾಗಿ ಪರಿಚಯಿಸಿದರು. ವಿಜಯ್ 18 ವರ್ಷ ವಯಸ್ಸಿನವನಾಗಿದ್ದಾಗ, ಅವರ ತಂದೆ ಅವರನ್ನು ನಾಯಕನನ್ನಾಗಿ ಪರಿಚಯಿಸಿದರು. ಜೂನ್ 22, 1974ರಲ್ಲಿ ಜನಿಸಿದ ವಿಜಯ್‌ಗೆ ಚಿತ್ರರಂಗ ಹೂವಿನ ಹಾಸಿಗೆಯಾಗಿರಲಿಲ್ಲ. ಅವರ ತಂದೆ ಎಸ್.ಎ. ಚಂದ್ರಶೇಖರ್ ಖ್ಯಾತ ನಿರ್ದೇಶಕರಾಗಿದ್ದು, ತಾಯಿ ಶೋಭಾ ಚಂದ್ರಶೇಖರ್ ಗಾಯಕಿ ಹಾಗೂ ಕಥೆಗಾರ್ತಿಯಾಗಿದ್ದರು. ಬಾಲ್ಯದಿಂದಲೇ ಸಿನಿಮಾ ವಾತಾವರಣದಲ್ಲೇ ಬೆಳೆದ ವಿಜಯ್, ಚಿಕ್ಕ ವಯಸ್ಸಿನಲ್ಲೇ ಕ್ಯಾಮೆರಾ, ಸೆಟ್ ಮತ್ತು ಕಥೆಗಳ ಜಗತ್ತಿಗೆ ಹತ್ತಿರವಾದರು. ಆದರೆ, ಅವರು ಆರಂಭದಲ್ಲೇ ಸೂಪರ್ ಸ್ಟಾರ್ ಆಗಿರಲಿಲ್ಲ. ತಂದೆಯ ನಿರ್ದೇಶನದ ಕೆಲ ಸಿನಿಮಾಗಳಲ್ಲಿ ಬಾಲನಟನಾಗಿ ಕಾಣಿಸಿಕೊಂಡರೂ, ಜನರು ಅವರನ್ನು ತಕ್ಷಣವೇ ಸ್ವೀಕರಿಸಲಿಲ್ಲ.

ಎಸ್.ಎ. ಚಂದ್ರಶೇಖರ್ ವಿಜಯ್‌ನನ್ನ ಬ್ರಾಂಡ್ ಮಾಡಲು ಅವರ ತಂದೆ ನಿರ್ಧರಿಸಿದರು ಮತ್ತು ವಿಜಯ್ ಫ್ಯಾನ್ ಕ್ಲಬ್ ಅನ್ನು ಪ್ರಾರಂಭಿಸಿದರು. 1994 ರ ಚಲನಚಿತ್ರ ರಸಗನ್‌ನಲ್ಲಿ ಅವರು ವಿಜಯ್ ಅವರಿಗೆ ಇಳಯತಳಪತಿ ಎಂಬ ಬಿರುದನ್ನು ನೀಡಿದರು. ಇದರರ್ಥ ಯುವ ನಾಯಕ. ಅಂದಿನಿಂದ, ಜನರು ಜೋಸೆಫ್ ವಿಜಯ್ ಅವರನ್ನು ಅವರ ಹೆಸರಿನ ಬದಲು ತಳಪತಿ ವಿಜಯ್ ಎಂದು ಕರೆಯುತ್ತಾರೆ.

1992ರಲ್ಲಿ ನಾಲೈಯ ತೀರ್ಪು ಮೂಲಕ ಪೂರ್ಣ ಪ್ರಮಾಣದ ನಾಯಕನಾಗಿ ಚಿತ್ರರಂಗಕ್ಕೆ ಬಂದಾಗ ವಿಜಯ್ ಎದುರಿಸಿದ ಅತಿದೊಡ್ಡ ಸವಾಲು ಸ್ವಜನಪಕ್ಷಪಾತ (ಪರಂಪರೆ) ಮತ್ತು ಅವರ ರೂಪ. ಅವರ ಬಾಹ್ಯ ರೂಪವನ್ನು ಕಂಡು ''ಇವನೂ ಒಬ್ಬ ನಾಯಕನಾ?'' ''ಇವರಿಗೆ ನಟನೆಯೇ ಬರುವುದಿಲ್ಲ'', ''ತಂದೆಯ ಪ್ರಭಾವದಿಂದ ಅವಕಾಶ ಸಿಗುತ್ತಿದೆ'' ಎಂಬ ಮಾತುಗಳು ಕೇಳಿಬಂದವು. ಒಟ್ಟಿನಲ್ಲಿ ಇವರನ್ನ ಹೀಯಾಳಿಸಿದವರೇ ಹೆಚ್ಚು. ತಂದೆ ನಿರ್ದೇಶಕರಾಗಿದ್ದರೂ, ಪ್ರೇಕ್ಷಕರು ಅವರನ್ನು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಅಂದಿನ ಸಿನಿಮಾ ಪತ್ರಿಕೆಗಳು ಅವರ ಮುಖಚರ್ಯೆಯ ಬಗ್ಗೆಯೇ ಬರೆದಿದ್ದವು. ಸಾಮಾನ್ಯವಾಗಿ ಇಂತಹ ಸಂದರ್ಭದಲ್ಲಿ ಯಾರು ಬೇಕಾದರೂ ಕುಗ್ಗಿಹೋಗುತ್ತಿದ್ದರು. ಆದರೆ ವಿಜಯ್ ಇಲ್ಲಿ ವಿಭಿನ್ನವಾಗಿ ನಿಂತರು. ಅವರು ಪ್ರತಿಕ್ರಿಯೆ ನೀಡುವ ಬದಲು ತಮ್ಮನ್ನು ತಾವು ಬದಲಿಸಿಕೊಳ್ಳಲು ನಿರ್ಧರಿಸಿದರು.

ಅವರ ಈ ಮೌನವೇ ಮುಂದೆ ಅವರ ದೊಡ್ಡ ಶಕ್ತಿಯಾಯಿತು. ತಮ್ಮ ತಂಗಿ ವಿದ್ಯಾ ಅವರ ಅಕಾಲಿಕ ಮರಣ ವಿಜಯ್ ಅವರನ್ನು ಮಾನಸಿಕವಾಗಿ ಗಟ್ಟಿಗೊಳಿಸಿತು. ಅತಿಯಾಗಿ ಮಾತನಾಡುತ್ತಿದ್ದ ಬಾಲಕ ಶಾಂತಸ್ವರೂಪಿಯಾದ. ಅವರ ಸಿನಿಮಾಗಳಲ್ಲೇ ಒಂದು ಸಂಭಾಷಣೆ ಇದೆ: ''ಬದುಕಲ್ಲಿ ನಮಗೆ ಅವಮಾನಗಳು ಹೆಚ್ಚಾದಷ್ಟೂ ನಾವು ಬೆಳೆಯುವ ವೇಗವೂ ಹೆಚ್ಚಾಗುತ್ತದೆ.'' ಇದು ಅವರ ಬದುಕಿನ ಮೂಲಮಂತ್ರವಾಯಿತು. ಈ ಗಂಭೀರತೆಯೇ ಮುಂದೆ ಅವರ ರಾಜಕೀಯ ವ್ಯಕ್ತಿತ್ವಕ್ಕೆ ಸೈಲೆಂಟ್ ಕಿಲ್ಲರ್ ಇಮೇಜ್‌ಗೆ ಬುನಾದಿ ಹಾಕಿತು. 1996ರಲ್ಲಿ ವಿಜಯ್ ತಂದೆ ಎಸ್ ಚಂದ್ರಶೇಖರ್ ಡೈರೆಕ್ಟರ್ ಆಗಿ ವಿಜಯ್ ನಟನಾಗಿ ನಟಿಸಿದ್ದ ''ಪೂವೇ ಉನಕ್ಕಾಗ'' ಸಿನಿಮಾ ಸಕ್ಸಸ್ ಕಂಡಿತ್ತು. ''ಪೂವೇ ಉನಕ್ಕಾಗ'' ವಿಜಯ್‌ಗೆ ಯಶಸ್ಸಿನ ರುಚಿ ತೋರಿಸಿದ ಮೊದಲ ಸಿನಿಮಾ.

ಸಿನಿಮಾ ಆಯ್ಕೆಗಳಲ್ಲಿನ ರಾಜಕೀಯ ಬಿತ್ತನೆ :-

ವಿಜಯ್ ಕೇವಲ ಡಾನ್ಸ್ ಮತ್ತು ಫೈಟ್ ಮಾಡಲು ಸೀಮಿತವಾಗಲಿಲ್ಲ. ಆರಂಭದಲ್ಲಿ ಕೌಟುಂಬಿಕ ಚಿತ್ರಗಳನ್ನು ಮಾಡುತ್ತಿದ್ದ ಅವರು, ನಂತರ ಸಮಾಜದ ನಾಡಿಮಿಡಿತ ಅರಿತರು. ವಿಜಯ್ ಅವರ ಸಿನಿಮಾ ಬದುಕನ್ನ ಮೂರು ಹಂತಗಳಲ್ಲಿ ವಿಂಗಡಿಸಬಹುದು.

ಮೊದಲ ಹಂತ: ಕೇವಲ ಪ್ರೇಮಕಥೆಗಳಿಗೆ ಸೀಮಿತ (ಉದಾ: ಪೂವೆ ಉನಕ್ಕಾಗ). ಇದು ಮಹಿಳಾ ಪ್ರೇಕ್ಷಕರನ್ನು ಸೆಳೆಯಲು ಸಹಕಾರಿಯಾಯಿತು.

ಎರಡನೇ ಹಂತ: ಆಕ್ಷನ್ ಹಿರೋ ಆಗಿ ಬದಲಾದ ಕಾಲ (ಉದಾ: ಗಿಲ್ಲಿ, ಪೊಕ್ಕಿರಿ). ಇದು ಮಾಸ್ ಹೀರೋ ಆಗಿ ಬೆಳೆಯಲು ಕಾರಣವಾಯಿತು.

ಮೂರನೇ ಹಂತ: ವ್ಯವಸ್ಥಿತ ರಾಜಕೀಯ ದಾಳ (ಉದಾ: ಕತ್ತಿ, ಮೆರ್ಸಲ್, ಸರ್ಕಾರ್).



ವಿಜಯ್ ಅವರು ಕಳೆದ ಹತ್ತು ವರ್ಷಗಳಿಂದ ಸಿನಿಮಾಗಳನ್ನು ಕೇವಲ ಮನರಂಜನೆಗಾಗಿ ಮಾಡಲಿಲ್ಲ. ಪ್ರತಿಯೊಂದು ಸಿನಿಮಾವೂ ಒಬ್ಬ ರಾಜಕಾರಣಿ ನೀಡಬಹುದಾದ ಭರವಸೆಯಂತೆಯೇ ಇರುತ್ತಿತ್ತು. ಕತ್ತಿ ಸಿನಿಮಾ ರೈತರ ಆತ್ಮಹತ್ಯೆ ಮತ್ತು ಕಾರ್ಪೊರೇಟ್ ಲೂಟಿಯ ಬಗ್ಗೆ ಮಾತನಾಡಿದರೆ, ಮೆರ್ಸಲ್ ಸಿನಿಮಾ ಜಿಎಸ್‌ಟಿ ಮತ್ತು ಉಚಿತ ಆರೋಗ್ಯ ಸೇವೆಯ ಬಗ್ಗೆ ಧ್ವನಿ ಎತ್ತಿತು. ''ನಮ್ಮ ದೇಶದಲ್ಲಿ ಹಸಿವಿನಿಂದ ಸಾಯುವವರಿಗಿಂತ, ತಿಂದಿದ್ದನ್ನು ಅರಗಿಸಿಕೊಳ್ಳಲು ಕಷ್ಟಪಡುವವರೇ ಅಧಿಕಾರದಲ್ಲಿದ್ದಾರೆ'' ಎಂಬಂತಹ ಸಂಭಾಷಣೆಗಳು ನೇರವಾಗಿ ಆಡಳಿತ ವ್ಯವಸ್ಥೆಯ ಮೇಲೆ ಪ್ರಹಾರ ಮಾಡಿದವು.

ಸರ್ಕಾರ ಚಿತ್ರದಲ್ಲಿ ಅವರು ಮತದಾನದ ಮಹತ್ವ ಮತ್ತು 49 ಸೆಕ್ಷನ್ ಬಗ್ಗೆ ಜನರಿಗೆ ಅರಿವು ಮೂಡಿಸಿದಾಗ, ಜನರಿಗೆ ವಿಜಯ್ ಕೇವಲ ನಟನಾಗಿ ಕಾಣಲಿಲ್ಲ, ಬದಲಾಗಿ ಒಬ್ಬ ಕ್ರಾಂತಿಕಾರಿಯಾಗಿ ಕಂಡರು. ಆ ಚಿತ್ರದ ಒಂದು ಫೇಮಸ್ ಡೈಲಾಗ್: ''ನಾನು ರಾಜಕಾರಣಿ ಅಲ್ಲ, ಆದರೆ ಕಾರ್ಪೊರೇಟ್ ಕ್ರಿಮಿನಲ್ಸ್ ಮತ್ತು ಭ್ರಷ್ಟರನ್ನು ಮನೆಗೆ ಕಳುಹಿಸುವವರೆಗೂ ನಾನು ಸುಮ್ಮನಿರಲ್ಲ.'' ಈ ಸಂಭಾಷಣೆಗಳು ತೆರೆಯ ಮೇಲೆ ಚಪ್ಪಾಳೆ ಗಿಟ್ಟಿಸಿದರೆ, ತೆರೆಯ ಹಿಂದೆ ಅವರ ರಾಜಕೀಯ ಮಹತ್ವಾಕಾಂಕ್ಷೆಗೆ ಕಿಚ್ಚು ಹಚ್ಚಿದವು.

ತಂದೆಯ ಜೊತೆಗಿನ ಸಂಘರ್ಷ: ಕುಟುಂಬ ವರ್ಸಸ್ ಸಿದ್ಧಾಂತ:-

ವಿಜಯ್ ತಂದೆ ಖ್ಯಾತ ನಿರ್ದೇಶಕ ಎಸ್. ಎ. ಚಂದ್ರಶೇಖರ್ ಹಲವಾರು ಸಿನಿಮಾಗಳನ್ನು ನಿರ್ದೇಶನ ಮಾಡಿದ್ದಾರೆ. ಜೊತೆ ಜೊತೆಗೆ ವಿಜಯ್ ಹೆಸರಿನಲ್ಲಿ ಆಲ್ ಇಂಡಿಯಾ ದಳಪತಿ ವಿಜಯ್ ಮಕ್ಕಳ್ ಇಯಕ್ಕಮ್ (-) ಎಂಬ ಹೆಸರಿನ ಕಲ್ಯಾಣ ಸಂಸ್ಥೆಯನ್ನು ಆರಂಭಿಸಿದ್ದರು. ವಿಜಯ್ ಅವರ ಅಭಿಮಾನಿ ಸಂಘವು ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿತ್ತು ಮತ್ತು ಜನರಿಗೆ ಸಹಾಯ ಮಾಡುತ್ತಿತ್ತು. ನಂತರ, ಕ್ಲಬ್ 2011 ರ ಚುನಾವಣೆಯಲ್ಲಿ ಜಯಲಲಿತಾ ನೇತೃತ್ವದ ಎಐಎಡಿಎಂಕೆಯನ್ನು ಬೆಂಬಲಿಸಿತ್ತು. 2020 ರಲ್ಲಿ, ಚಂದ್ರಶೇಖರ್ ವಿಜಯ್ ಅವರ ಫ್ಯಾನ್ ಕ್ಲಬ್ ಅನ್ನು ರಾಜಕೀಯ ಪಕ್ಷವಾಗಿ ಪರಿವರ್ತಿಸಲು ನಿರ್ಧರಿಸಿದರು. ಅದೇ ಹೆಸರಿನಲ್ಲಿ ಪಕ್ಷವನ್ನು ನೋಂದಾಯಿಸಲು ಅವರು ಚುನಾವಣಾ ಆಯೋಗಕ್ಕೂ ಅರ್ಜಿ ಸಲ್ಲಿಸಿದ್ದರು. ಹಲವರು ವಿಜಯ್ ಕೂಡ ಈ ರಾಜಕೀಯ ಪಕ್ಷಕ್ಕೆ ಸೇರುತ್ತಾರೆ ಎಂದು ನಿರೀಕ್ಷಿಸಿದ್ದರು.

ಆದರೆ ವಿಜಯ್ ತಮ್ಮ ತಂದೆಯ ಈ ನಿರ್ಧಾರವನ್ನು ವಿರೋಧಿಸಿದರು. ಅವರು ತಮ್ಮ ಪೋಷಕರು ಸೇರಿದಂತೆ 11 ಜನರ ವಿರುದ್ಧ ಪ್ರಕರಣ ದಾಖಲಿಸಿದರು. ''ಈ ಅಭಿಮಾನಿ ಸಂಘವನ್ನ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ'' ಎಂದು ವಿಜಯ್ ದೂರಿದ್ದರು. ಈ ರೀತಿ ಮಾಡುತ್ತಿರುವುದು ದಳಪತಿ ವಿಜಯ್ ಅವರಿಗೆ ಕಿಂಚಿತ್ತು ಇಷ್ಟವಿರಲಿಲ್ಲ. ಹೀಗಾಗಿ ಹಲವು ಸಮಸ್ಯೆಗಳು ಎದುರಾಗಿತ್ತು. ''ನನಗೂ ಆ ಸಂಸ್ಥೆಗೂ ಯಾವುದೇ ಸಂಬಂಧವಿಲ್ಲ ನನ್ನ ಕುಟುಂಬ ನನ್ನ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದೆ'' ಎಂದು ಅಪ್ಪ ಕಟ್ಟಿರೋ ಪಕ್ಷದಿಂದ ದೂರ ಉಳಿಯಲು ಚೆನ್ನೈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ರು. ''ತಮ್ಮ ತಂದೆ ಪ್ರಾರಂಭಿಸಿರುವ ಪಕ್ಷವನ್ನು ರದ್ದು ಮಾಡಬೇಕು ಹಾಗೂ ಆ ಪಕ್ಷದಲ್ಲಿ ತಮ್ಮ ಹೆಸರು ಹಾಗೂ ಭಾವಚಿತ್ರವನ್ನು ಬಳಸಬಾರದೆಂದು'' ಆದೇಶ ನೀಡುವಂತೆ ನ್ಯಾಯಾಲಯಕ್ಕೆ ಮನವಿ ಮಾಡಿದ್ರು.

ಅಂತೆಯೇ ನ್ಯಾಯಾಲಯ ಸಹ ವಿಜಯ್ ಪರವಾಗಿಯೇ ಆದೇಶ ನೀಡಿತ್ತು. ಬಳಿಕ ಎಸ್ಎ ಚಂದ್ರಶೇಖರ್ ಅವರು ನ್ಯಾಯಾಲಯಕ್ಕೆ ಅಫಿಡವಿಟ್ ಸಲ್ಲಿಸಿ, ಪಕ್ಷಕ್ಕೆ ಸಂಬಂಧಿಸಿದಂತೆ ವಿಜಯ್ ಅವರ ಚಿತ್ರ, ಹೆಸರು ಬಳಸುವುದಿಲ್ಲ ಎಂದಿದ್ರು. ಕೊನೆಗೆ ಈ ಪ್ರಕರಣ ಬಗೆ ಹರಿದ ಮರು ವರ್ಷವೇ ಆಲ್ ಇಂಡಿಯಾ ದಳಪತಿ ವಿಜಯ್ ಮಕ್ಕಳ್ ಇಯಕ್ಕಂ ಪಕ್ಷ ರದ್ದಾಯ್ತು.

ತಮ್ಮ ಇಷ್ಟಕ್ಕೆ ವಿರುದ್ಧವಾಗಿ ತಮ್ಮ ಹೆಸರಲ್ಲಿ ರಾಜಕೀಯ ಪಕ್ಷ ಕಟ್ಟಿದ್ದ ತಂದೆಯ ವಿರುದ್ಧವೇ ನ್ಯಾಯಾಲಯದ ಮೆಟ್ಟಿಲು ಹತ್ತಿದ ನಿಷ್ಠುರಿ ವಿಜಯ್. ಇದು ಹೊರನೋಟಕ್ಕೆ ಕಟು ನಿರ್ಧಾರವೆಂದು ಕಂಡರೂ, ರಾಜಕೀಯವಾಗಿ ಇದು ಬಹಳ ದೊಡ್ಡ ಚಾಣಾಕ್ಷತನವಾಗಿತ್ತು. ಅವರು ತನ್ನ ತಂದೆಯ ರಿಮೋಟ್ ಕಂಟ್ರೋಲ್ ನಾಯಕನಾಗಿ ಇರಲು ಬಯಸಲಿಲ್ಲ. ಒಬ್ಬ ಸ್ವತಂತ್ರ ನಾಯಕನಾಗಿ ಜನರಿಗೆ ಕಾಣಿಸಿಕೊಳ್ಳಬೇಕೆಂಬ ಅವರ ಹಂಬಲ ಇಲ್ಲಿ ಸ್ಪಷ್ಟವಾಯಿತು. ''ಇವನು ಸ್ವಂತ ತಂದೆಯನ್ನೇ ರಾಜಕೀಯಕ್ಕೆ ಬಳಸಿಕೊಳ್ಳದವನು, ಇನ್ನು ಯಾರಿಗೆ ಮಣಿಯುತ್ತಾನೆ?'' ಎಂಬ ಸಂದೇಶ ಜನರಿಗೆ ರವಾನೆಯಾಯಿತು.

ಸಾಂಕೇತಿಕ ಪ್ರತಿಭಟನೆ ಮತ್ತು ಸೈಕಲ್ ಸವಾರಿ:-

2021ರ ತಮಿಳುನಾಡು ವಿಧಾನಸಭಾ ಚುನಾವಣೆಯ ದಿನ ವಿಜಯ್ ಸೈಕಲ್‌ನಲ್ಲಿ ಬಂದು ಮತ ಚಲಾಯಿಸಿದ ಘಟನೆ ದೇಶದಾದ್ಯಂತ ಸುದ್ದಿಯಾಯಿತು. ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆಯನ್ನು ಸಾಂಕೇತಿಕವಾಗಿ ವಿರೋಧಿಸಲು ಅವರು ಸೈಕಲ್ ಬಳಸಿದ್ದರು. ಸಾಮಾನ್ಯ ಜನರು ಎದುರಿಸುತ್ತಿರುವ ಸಮಸ್ಯೆಯನ್ನು ಅರ್ಥಮಾಡಿಕೊಳ್ಳುವ ವ್ಯಕ್ತಿ ಎಂಬ ಭಾವನೆ ಜನರಲ್ಲಿ ಮತ್ತಷ್ಟು ಬಲವಾಯಿತು. ವಿಜಯ್ ಯಾವುದೇ ಘೋಷಣೆ ಕೂಗಲಿಲ್ಲ. ಆದರೆ ಮರುದಿನದ ಹೆಡ್‌ಲೈನ್‌ಗಳೆಲ್ಲಾ ಆ ಕೆಂಪು ಸೈಕಲ್ ಬಗ್ಗೆಯೇ ಸುದ್ದಿಗಳಿದ್ದವು. ಸಿನಿಮಾದಲ್ಲಿ ಅವರು ಹೇಳುವಂತೆ ''ನಾವು ಏನು ಮಾಡ್ತೀವಿ ಅನ್ನೋದನ್ನ ಯಾರಿಗೂ ಹೇಳ್ಬೇಡ, ಮಾಡಿದ್ದನ್ನ ಇಡೀ ಊರು ನೋಡುವಂತೆ ಮಾಡು'' ಎಂಬ ನೀತಿಯನ್ನು ಅವರು ನಿಜ ಜೀವನದಲ್ಲೂ ಅನುಸರಿಸಿದರು.

ರಾಜಕೀಯ ಸವಾಲುಗಳು ಮತ್ತು ತಮಿಳಗ ವೆಟ್ರಿ ಕಳಗಂ:-

ವಿಜಯ್ ಅನೇಕ ವರ್ಷಗಳಿಂದ ಅಭಿಮಾನಿ ಸಂಘಗಳ ಮೂಲಕ ಸಮಾಜಸೇವೆ ನಡೆಸುತ್ತಿದ್ದ ವಿಜಯ್, ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ, ಶಿಕ್ಷಣ ಸಹಾಯ, ರಕ್ತದಾನ ಶಿಬಿರ, ಪ್ರವಾಹ ಸಂತ್ರಸ್ತರಿಗೆ ನೆರವು ಮೊದಲಾದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದರು. ಈ ಕಾರ್ಯಗಳೇ ನಂತರ ರಾಜಕೀಯ ನೆಲೆಯನ್ನು ನಿರ್ಮಿಸಿಕೊಟ್ಟವು. ಸಿನಿಮಾ ಅಭಿಮಾನಿ ಬಳಗ ನಿಧಾನವಾಗಿ ಜನ ಚಳವಳಿಯ ರೂಪ ಪಡೆದುಕೊಂಡಿತು. ನಂತರ ಅವರು ''ತಮಿಳಗ ವೆಟ್ರಿ ಕಳಗಂ'' ಪಕ್ಷವನ್ನು ಸ್ಥಾಪಿಸಿ ಅಧಿಕೃತವಾಗಿ ರಾಜಕೀಯ ಪ್ರವೇಶ ಮಾಡಿದರು. ಅವರ ಭಾಷಣಗಳಲ್ಲಿ ಜಾತಿ, ಧರ್ಮ, ದ್ವೇಷ ರಾಜಕಾರಣಕ್ಕಿಂತ ಶಿಕ್ಷಣ, ಉದ್ಯೋಗ, ಸಮಾನತೆ ಮತ್ತು ಯುವಕರ ಭವಿಷ್ಯಕ್ಕೆ ಹೆಚ್ಚು ಒತ್ತು ನೀಡಲಾಯಿತು. ಇದೇ ಕಾರಣಕ್ಕೆ ಯುವ ಮತದಾರರು ದೊಡ್ಡ ಸಂಖ್ಯೆಯಲ್ಲಿ ಅವರತ್ತ ಸೆಳೆಯಲ್ಪಟ್ಟರು.

ತಮಿಳುನಾಡಿನಲ್ಲಿ ದಶಕಗಳ ಕಾಲ ಎರಡು ಪ್ರಮುಖ ರಾಜಕೀಯ ಶಕ್ತಿಗಳೇ ಅಧಿಕಾರ ನಡೆಸುತ್ತಿದ್ದ ಪರಿಸ್ಥಿತಿಯಲ್ಲಿ, ವಿಜಯ್ ಹೊಸ ಪರ್ಯಾಯವಾಗಿ ಕಾಣಿಸಿಕೊಂಡರು. ಅವರು ಸಿನಿಮಾ ಜನಪ್ರಿಯತೆಯನ್ನು ಮಾತ್ರ ರಾಜಕೀಯಕ್ಕೆ ಬಳಸಲಿಲ್ಲ; ಯುವಜನರ ಆಶಾಭಾವನೆ, ಬದಲಾವಣೆಯ ನಿರೀಕ್ಷೆ ಮತ್ತು ಸ್ವಚ್ಛ ಆಡಳಿತದ ಕನಸನ್ನು ತಮ್ಮ ರಾಜಕೀಯದ ಕೇಂದ್ರಬಿಂದುವಾಗಿಸಿದರು. ವಿಜಯ್ ಈಗ ನೂತನ ಮುಖ್ಯಮಂತ್ರಿಯಾಗಿದ್ದಾರೆ. ವಿಜಯ್ ಚುನಾವಣಾ ರ್‍ಯಾಲಿಗಳಲ್ಲಿ ಹೇಳುತ್ತಿದ್ದ ಒಂದು ಮಾತು, ''ನೀವು ಇಲ್ಲಿಯವರೆಗೆ ಅನೇಕರಿಗೆ ಅವಕಾಶ ಕೊಟ್ಟಿದ್ದೀರಿ, ಈಗ ಒಮ್ಮೆ ನನ್ನನ್ನು ಪರೀಕ್ಷಿಸಿ ನೋಡಿ.'' ಎಂಬುದಾಗಿತ್ತು. ಸಿನಿಮಾ ಡೈಲಾಗ್‌ಗಳಾದ '' '' (ತುಪಾಕಿ) ಅಥವಾ ''ಜಯಿಸೋದು ಎಷ್ಟು ಮುಖ್ಯವೋ ಹಾಗೇಯೇ ಗುರಿಯಷ್ಟೇ ದಾರಿಯೂ ಮುಖ್ಯ'' (ಬಿಗಿಲ್) ಎಂಬ ತಮ್ಮ ಸಿನಿಮಾದ ಡೈಲಾಗ್‌ಗಳನ್ನೇ ಅವರು ತತ್ವವಾಗಿ ಮೈಗೂಡಿಸಿಕೊಂಡರು.

ವಿಜಯ್ ಮುಂದಿರುವ ಸವಾಲುಗಳು:-

ಒಬ್ಬ ಮುಖ್ಯಮಂತ್ರಿಯಾಗಿ ವಿಜಯ್ ಅವರ ಮುಂದಿರುವ ಹಾದಿ ಸುಗಮವಾಗಿಲ್ಲ. ತೆಲುಗು ಮತ್ತು ತಮಿಳು ಚಿತ್ರರಂಗದ ಇತಿಹಾಸವನ್ನು ನೋಡಿದರೆ, ನಟರು ರಾಜಕೀಯಕ್ಕೆ ಬಂದು ಯಶಸ್ವಿಯಾದ ಉದಾಹರಣೆಗಳೂ ಇವೆ (ಎಂ.ಜಿ.ಆರ್, ಎನ್.ಟಿ.ಆರ್), ವಿಫಲರಾದವರೂ ಇದ್ದಾರೆ. ಜಾತಿ ಮತ್ತು ಧರ್ಮಗಳ ವಿಷಬೀಜ ಬಿತ್ತದಂತೆ ಆಡಳಿತ ನಡೆಸುವುದು ಒಂದು ಕವಾತು ಇದ್ದಂತೆ. ಯುವಕರು ಭಾವನಾತ್ಮಕವಾಗಿ ವಿಜಯ್ ಅವರನ್ನು ಬೆಂಬಲಿಸಿದ್ದಾರೆ. ಆದರೆ ಭಾವನೆಗಳು ಉದ್ಯೋಗವನ್ನಾಗಲಿ, ಅನ್ನವನ್ನಾಗಲಿ ನೀಡುವುದಿಲ್ಲ. ಸಿನೆಮಾದಲ್ಲಿ ಎರಡೂವರೆ ಗಂಟೆಯಲ್ಲಿ ಸಮಸ್ಯೆ ಬಗೆಹರಿಯುತ್ತದೆ. ಆದರೆ ಬದುಕು ಸಿನೆಮಾ ಅಲ್ಲ. ರಾಜಕಾರಣದ ವಾಸ್ತವ ಮತ್ತು ಸಿನೆಮಾದ ಭ್ರಮೆಗಳು ಬೇರೆ ಬೇರೆ.

ಜೋಸೆಫ್ ವಿಜಯ್ ಅವರು ಇಂದು ತಮಿಳುನಾಡಿನ ಅಧಿಪತಿಯಾಗಿ ನಿಂತಿದ್ದಾರೆ. ಜನರು ಹೊಸತನವನ್ನು ಬಯಸಿದ್ದಾರೆ ಎಂಬುದು ಈ ಗೆಲುವಿನಿಂದ ಸ್ಪಷ್ಟವಾಗಿದೆ. ಸಿನಿಮಾ ಗ್ಲಾಮರ್ ಅನ್ನು ಬಿಟ್ಟು ಜನರ ಕಣ್ಣೀರು ಒರೆಸುವ ಕೆಲಸಕ್ಕೆ ಅವರು ಮುಂದಾಗಿದ್ದಾರೆ. ರಾಜಕೀಯ ಎಂಬುದು ಸಿನಿಮಾ ಸೆಟ್ ಅಲ್ಲ ಎಂಬ ಅರಿವು ಅವರಿಗೆ ಸದಾ ಇರಬೇಕು.

''ನೀವು ಜನರ ಹೃದಯವನ್ನು ಗೆದ್ದಿದ್ದೀರಿ, ಈಗ ಅವರ ಬದುಕನ್ನು ಗೆಲ್ಲಬೇಕಿದೆ.'' ಅಧಿಕಾರ ಎನ್ನುವುದು ಕೇವಲ ಕಿರೀಟವಲ್ಲ, ಅದೊಂದು ದೊಡ್ಡ ಜವಾಬ್ದಾರಿ. ತಮಿಳುನಾಡಿನ ಒಳಿತಿಗಾಗಿ, ಯುವಜನತೆಯ ಭವಿಷ್ಯಕ್ಕಾಗಿ ನೀವು ಇನ್ನಷ್ಟು ಸೂಕ್ಷ್ಮವಾಗಿ ಮತ್ತು ಚಾಣಾಕ್ಷತನದಿಂದ ಕೆಲಸ ಮಾಡಲಿ ಎಂಬುದು ಜನರ ಹಂಬಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR